# ಕರ್ನಾಟಕ ವಿಧಾನಸಭಾ ಚುನಾವಣೆ-2018



# CPI(M)

## ಚುನಾವಣಾ ಮನವಿ

- ಬಿಜೆಪಿ ಸೋಲಿಸಿ, ಸೌಹಾರ್ದ ಕರ್ನಾಟಕವನ್ನು ಉಳಿಸಿ
- ಸಿಪಿಐ(ಎಂ), ಎಡ ಅಭ್ಯರ್ಥಿಗಳನ್ನು ಗೆಲ್ಲಿಸಿ ವಿಧಾನಸಭೆಯಲ್ಲಿ ದುಡಿಯುವ ಜನರ ದನಿ ಮೊಳಗಿಸಿ
- ಜನ-ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಿ




ವ್ಯಂಗಚಿತ್ರ ಕೃಪೆ: ಪಿ.ಮಹಮ್ಮದ್, ವಿಜಯಕರ್ನಾಟಕ

ಕರ್ನಾಟಕ ವಿಧಾನಸಭೆ ಚುನಾವಣೆ ಮೇ 12ರಂದು ನಡೆಯಲಿದೆ. ಈ ಬಾರಿಯ ಕರ್ನಾಟಕ ವಿಧಾನಸಭೆ ಚುನಾವಣೆ ರಾಜ್ಯದ ಮಾತ್ರವಲ್ಲ, ರಾಷ್ಟ್ರೀಯ ರಾಜಕೀಯದ ದಿಕ್ಕಿನ ದೃಷ್ಟಿಯಿಂದಲೂ ಮಹತ್ವವನ್ನು ಪಡೆದಿದೆ. ಅದರಲ್ಲೂ – ಬಿಜೆಪಿಯ 'ಕಾಂಗ್ರೆಸ್–ಮುಕ್ತ' (ನಿಜವಾಗಿಯೂ ಯಾವುದೇ ವಿರೋಧ ಪಕ್ಷಗಳಿಂದ ಮುಕ್ತವಾದ) ಭಾರತದ ಘೋಷಣೆಯ, ತ್ರಿಪುರಾದಲ್ಲಿ ಬಿಜೆಪಿ ಗೆಲುವು, ಆ ಮೇಲೆ ಉತ್ತರ ಪ್ರದೇಶ  ಬಿಹಾರ ಮತ್ತಿತರ ಉಪಚುನಾವಣೆಗಳಲ್ಲಿ ತೀವ್ರ ಹಿನ್ನಡೆಯ,  ಮೋದಿ ಮ್ಯಾಜಿಕ್ ಕರಗುತ್ತಿರುವ, ಮುಂಬರುವ ಉತ್ತರ ಭಾರತದ ರಾಜ್ಯಗಳ ಮತ್ತು ಪಾರ್ಲಿಮೆಂಟ್ ಚುನಾವಣೆ – ಇವುಗಳ ಹಿನ್ನೆಲೆಯಲ್ಲಿ ಈ ರಾಷ್ಟ್ರೀಯ ಮಹತ್ವ ಬಂದಿದೆ.

ಸಿ.ಪಿ.ಐ.(ಎಂ) ದುಡಿಯುವ ಜನವರ್ಗಗಳ ಪಕ್ಷಪಾತಿಯಾಗಿದೆ. ದುಡಿಯುವ ಜನರ ಹಿತವೇ ಅದರ ಆದ್ಯತೆಯಾಗಿದೆ.  ಜನಪರ ಹೋರಾಟಗಳೇ ಅದರ ಉಸಿರಾಗಿದೆ.  ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ದಮನದ ವಿರುದ್ಧ ನಡೆಸಲಾಗುತ್ತಿರುವ ನಿರಂತರ ಆಂದೋಲನ ಅದಾಗಿದೆ.  ಚುನಾವಣೆಗಳನ್ನು ಸಹ ಶೋಷಕ ಮತ್ತು ಶೋಷಿತರ ನಡುವಿನ ಸಂಘರ್ಷದ ಭಾಗವೆಂದೇ ಪರಿಗಣಿಸುವ ಜನಾಂದೋಲನವನ್ನು ಬಲಪಡಿಸುವ ಮುಖ್ಯ ಉದ್ದೇಶದಿಂದಲೇ ಚುನಾವಣೆಗಳಲ್ಲಿ ಪಾಲ್ಗೊಳ್ಳುತ್ತದೆ.

ರಾಜ್ಯದ ರಾಜಕಾರಣದಲ್ಲಿ ಜನಪರ, ಪ್ರಗತಿಪರ ಬದಲಾವಣೆಯನ್ನು ಬಯಸುವವರಿಗೆ ಪ್ರಸಕ್ತ ಚುನಾವಣೆ ಮತ್ತೊಂದು ಅವಕಾಶವನ್ನು ಒದಗಿಸಿದೆ ಎಂದು ಸಿ.ಪಿ.ಐ.(ಎಂ) ಭಾವಿಸುತ್ತದೆ.  ರಾಜ್ಯದ ದುಡಿಯುವ ಜನವಿಭಾಗಗಳ ಅಂದರೆ ರೈತರ, ಕೃಷಿಕೂಲಿಕಾರರ, ಕಾರ್ಮಿಕರ, ಮಧ್ಯಮ ವರ್ಗದ ನೌಕರರ ಮತ್ತು ಇತರ ಶ್ರಮಜೀವಿಗಳ ಹಿತದೃಷ್ಟಿಯಿಂದ ಈ ಅವಕಾಶದ ಸದ್ಬಳಕೆ ಮಾಡುವ ಕುರಿತು ಈ ಚುನಾವಣಾ ಮನವಿಯ ಮೂಲಕ ಮತದಾರರೊಂದಿಗೆ ಕೆಲವು ಮುಖ್ಯ ವಿಚಾರಗಳನ್ನು ಹಂಚಿಕೊಳ್ಳಲು ಸಿ.ಪಿ.ಐ.(ಎಂ) ಬಯಸುತ್ತದೆ.

## ಬಿಜೆಪಿ ಸೋಲಿಸಿ, ಸೌಹಾರ್ದ ಕರ್ನಾಟಕವನ್ನು ಉಳಿಸಿ

ಕೇಂದ್ರದಲ್ಲಿ ಮೋದಿ ನಾಯಕತ್ವದ ಬಿಜೆಪಿ ಸರಕಾರ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಸಂವಿಧಾನದ ಮೂಲ ಆಶಯಗಳನ್ನು ಮತ್ತು ಪ್ರಜಾಪ್ರಭುತ್ವವನ್ನು ನಾಶ ಮಾಡುವ ಒಂದು ಬಲಪಂಥೀಯ ಸರ್ವಾಧಿಕಾರಶಾಹಿ–ಕೋಮುವಾದಿ ಆಳ್ವಿಕೆಯತ್ತ ಹೊರಳಿರುವ ಗಂಭೀರ ಸ್ಥಿತಿಯಲ್ಲಿ ಈ ಚುನಾವಣೆಗಳು ನಡೆಯುತ್ತಿವೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಎಂದಿನಂತೆ ಜನ–ವಿರೋಧಿ ನವ–ಉದಾರವಾದಿ ಚೌಕಟ್ಟಿನೊಳಗಿನ ಆರ್ಥಿಕ ನೀತಿಗಳನ್ನು ಅನುಸರಿಸುತ್ತಾ ಜನರ ನಿರೀಕ್ಷೆಗಳನ್ನು ಆಶೋತ್ತರಗಳನ್ನು ಈಡೇರಿಸುವುದರಲ್ಲಿ ವಿಫಲವಾಗಿದೆ. ಆದ್ದರಿಂದ ಬಿಜೆಪಿ ಮುಂದಿನ ರಾಜ್ಯ ಸರಕಾರ ತನ್ನದೇ ಎಂದು ಆಕ್ರಾಮಕವಾಗಿ ಬಿಂಬಿಸುತ್ತಿದೆ. ಸಾಮಾನ್ಯವಾಗಿ ರಾಜ್ಯದ ಚುನಾವಣೆಗಳಲ್ಲಿ ಹಾಲಿ ರಾಜ್ಯ ಸರಕಾರದ, ಸ್ಪರ್ಧಿಸುತ್ತಿರುವ ವಿರೋಧ ಪಕ್ಷಗಳ ಹಿಂದಿನ ಸರಕಾರಗಳ ಸಾಧನೆ–ವೈಫಲ್ಯಗಳೇ ಮುಖ್ಯ ಮಾನದಂಡವಾಗಬೇಕು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಕೇಂದ್ರದ ಬಿಜೆಪಿ ಸರಕಾರದ ಗಂಭೀರ ವೈಫಲ್ಯಗಳನ್ನು ಆ ಪಕ್ಷ ರಾಜ್ಯದಲ್ಲೂ ಅಧಿಕಾರ ಹಿಡಿದರೆ ಮುಂಬರುವ ಭೀಕರ ಅಪಾಯಗಳನ್ನು ಮತದಾರ ಪರಿಗಣಿಸಲೇಬೇಕಾದ ವಿಶೇಷ ಪರಿಸ್ಥಿತಿ ಇದೆ.

ಸುಮಾರು ನಾಲ್ಕು ವರ್ಷಗಳ ಮೋದಿ ಸರ್ಕಾರವು ಒಂದು ಬಲಪಂಥೀಯ ಸರ್ವಾಧಿಕಾರಿಶಾಹಿ–ಕೋಮುವಾದಿ ಆಳ್ವಿಕೆ ಆರಂಭವಾಗಲು ಹಾದಿ ಮಾಡಿಕೊಟ್ಟಿದೆ. ಈ ಆಳ್ವಿಕೆಯ ನಾಲ್ಕು ಮುಖ್ಯ ಲಕ್ಷಣಗಳೆಂದರೆ,

- *ಜನ–ವಿರೋಧಿ ನವ–ಉದಾರವಾದಿ ಧೋರಣೆಗಳನ್ನು ಇನ್ನೂ ಹೆಚ್ಚು ಆಕ್ರಾಮಕವಾಗಿ ಜಾರಿ ಮಾಡುವುದು; ಅದರ ಫಲಿತಾಂಶವಾಗಿ ದುಡಿಯುವ ಜನಗಳ ಮೇಲೆ ಸರ್ವತೋಮುಖ ಪ್ರಹಾರಗಳು*
- *ಪ್ರಭುತ್ವದ ಜಾತ್ಯತೀತ ಪ್ರಜಾಸತ್ತಾತ್ಮಕ ಚೌಕಟ್ಟಿಗೆ ಬೆದರಿಕೆ ಒಡ್ಡುವ ಆರ್.ಎಸ್.ಎಸ್.ನ ಹಿಂದುತ್ವ ಕಾರ್ಯಸೂಚಿಯ ಜಾರಿಗೆ ಎಡೆಬಿಡದ ಪ್ರಯತ್ನ; ಜತೆಗೆ ಅಲ್ಪಸಂಖ್ಯಾತರು ಮತ್ತು ದಲಿತರ ಮೇಲೆ ದಾಳಿಗಳು*
- *ಸಂವಿಧಾನಾತ್ಮಕ ಪ್ರಜಾಪ್ರಭುತ್ವವನ್ನು ನಿರ್ಬಂಧಿಸುವ ಮೂಲಕ, ಸಾಂವಿಧಾನಿಕ ಸಂಸ್ಥೆಗಳು ಮತ್ತು ಪ್ರಜಾಪ್ರಭುತ್ವದ ಹಕ್ಕುಗಳನ್ನು ಬುಡಮೇಲು ಮಾಡುವ ಮೂಲಕ ಒಂದು ಸರ್ವಾಧಿಕಾರಶಾಹಿ ವಿನ್ಯಾಸವನ್ನು ಕಟ್ಟುವುದು*
- *ಅಮೇರಿಕಾದೊಂದಿಗೆ ವ್ಯೂಹಾತ್ಮಕ ಮೈತ್ರಿಯನ್ನು ಬಲಪಡಿಸುವ ಮತ್ತು ಒಬ್ಬ ಅಡಿಯಾಳು ಮಿತ್ರನ ಪಾತ್ರವನ್ನು ನಿರ್ವಹಿಸುವುದು*

ವಿದೇಶಗಳಿಂದ ಕಪ್ಪು ಹಣ ತಂದು 15 ಲಕ್ಷ ರೂ. ಪ್ರತಿಯೊಬ್ಬರ ಅಕೌಂಟಿಗೆ ಹಾಕುವ, ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿಸುವ ಹಾಗೂ ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಖರ್ಚಿನ 1.5 ಪಟ್ಟು ಬೆಂಬಲ ಬೆಲೆ–ಮುಂತಾದ ಚುನಾವಣಾ ಆಶ್ವಾಸನೆಗಳು ಬರಿಯ ಚುನಾವಣಾ 'ಜುಮ್ಲಾ'(ಬೊಗಳೆ)ಗಳು ಎಂದು ಬಿಜೆಪಿ ಅಧ್ಯಕ್ಷ ಒಪ್ಪಿಕೊಂಡಿರುವುದು; ಅದನ್ನು ಮರೆಮಾಚಲು ಅನರ್ಥಕಾರಿ ನೋಟು ನಿಷೇಧ; ಅತ್ಯಂತ ಜನ–ವಿರೋಧಿ ಒಕ್ಕೂಟವಾದ–ವಿರೋಧಿ ರೀತಿಯಲ್ಲಿ ಜಿ.ಎಸ್.ಟಿ.ಯ ಜಾರಿ: ತೈಲದ ಅಂತರ್ರಾಷ್ಟ್ರೀಯ ಬೆಲೆಗಳು ಇಳಿಯುತ್ತಿರುವಾಗ ಅದರ ಮೇಲಿನ ಸುಂಕಗಳನ್ನು ಏರಿಸಿ ಆಂತರಿಕ ಬೆಲೆಗಳು ಏರುತ್ತಿರುವಂತೆ ಮಾಡಿದ್ದು; ಬ್ಯಾಂಕುಗಳ ಎನ್.ಪಿ.ಎ. ಹೊರೆ ಮೂರು ಪಟ್ಟಾಗಿ ತೀವ್ರ ಬಿಕ್ಕಟ್ಟು; ದೊಡ್ಡ ಉದ್ಯಮಿಗಳ 3 ಲಕ್ಷ ಕೋಟಿರೂ. ಕೆಟ್ಟ ಸಾಲ 'ರೈಟ್–ಆಫ್' ಮಾಡಿದ ಸರಕಾರದಿಂದ ರೈತರ ಸಾಲ ಮನ್ನಾಕ್ಕೆ ನಿರಾಕರಣೆ; ರೈತರ ಭೂಮಿ ಕಿತ್ತುಕೊಳ್ಳುವ ಭೂಸ್ವಾಧೀನ ಮಸೂದೆ ಮತ್ತು ರೈತ–ವಿರೋಧಿ ಜಾನುವಾರು ಮಾರಾಟ ನಿಷೇಧದ ಜಾರಿಗೆ ಪ್ರಯತ್ನ; ಸಾವಿರಾರು ಕೋಟಿ. ರೂ. ಸಾಲ ಪಾವತಿ ಮಾಡದೆ ಪಂಗನಾಮ ಹಾಕಿ ಲಲಿತ್ ಮೋದಿ ನೀರವ್ ಮೋದಿ ವಿಠ್ಠಲ ಮಲ್ಯರುಗಳಂಥವರಿಂದ ವಿದೇಶಗಳಿಗೆ 'ಸರಣಿ ಪಲಾಯನ' – ಮುಂತಾದವು ಮೋದಿ ಸರಕಾರದ ವೈಫಲ್ಯಗಳನ್ನೂ, ಇನ್ನಷ್ಟು ಆಕ್ರಾಮಕ ರೀತಿಯಲ್ಲಿ ನವ–ಉದಾರವಾದಿ ನೀತಿಗಳನ್ನು ಜಾರಿ ಮಾಡುವ ಜನ–ವಿರೋಧಿ ಸ್ವರೂಪವನ್ನು ಬಯಲಿಗೆಳೆದಿವೆ.

ಮಹಿಳೆಯರು,ದಲಿತರು,ಮುಸ್ಲಿಮರು, ಆದಿವಾಸಿಗಳ ಮೇಲೆ ದೌರ್ಜನ್ಯಗಳು ಮೋದಿ ಸರಕಾರದಡಿಯಲ್ಲಿ ಹೆಚ್ಚುತ್ತಿದ್ದು ಅವರ ಸ್ಥಿತಿಯಲ್ಲಿ ತೀವ್ರ ಹಿನ್ನಡೆಗಳಾಗಿವೆ. ಕಥುವಾ ಮತ್ತು ಉನ್ನಾವಿನ ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳ ಮೇಲಿನ ಬರ್ಬರ ಅತ್ಯಾಚಾರದ ಭೀಕರ ಪ್ರಕರಣಗಳಲ್ಲಿ ಬಿಜೆಪಿ ಶಾಸಕ–ಮಂತ್ರಿಗಳ ಪಾತ್ರ ಮತ್ತು ಅಪರಾಧಿಗಳ ರಕ್ಷಣೆಗೆ ಬಿಜೆಪಿ ಸರಕಾರಗಳ ಪ್ರಯತ್ನ, ಮಹಿಳೆಯರ ಬಗ್ಗೆ ಅದರ ಧೋರಣೆಯ ಬೆಚ್ಚಿಬೀಳಿಸುವ ರೂಪಕ. ಗುಜರಾತಿನ ಉನಾದಲ್ಲಿ ಗೋಸಾಗಾಣಿಕೆ ಆರೋಪದಲ್ಲಿ ಬಡಿತ, ಇತ್ತೀಚೆಗೆ ಕುದುರೆಸವಾರಿ ಮಾಡಿದ್ದಕ್ಕೆ ದಾಳಿ–ಕೊಲೆ, ಎಸ್.ಸಿ./ಎಸ್.ಟಿ. ದೌರ್ಜನ್ಯ ತಡೆ ಕಾಯಿದೆ ದುರ್ಬಲಗೊಳಿಸುವ ಸುಪ್ರೀಂ ತೀರ್ಪು, ಅದರ ವಿರುದ್ಧ ಪ್ರತಿಭಟಿಸಿದ ದಲಿತರ ವಿರುದ್ಧ ಸಾಮೂಹಿಕ ಅಪರಾಧ ಪ್ರಕರಣಗಳು – ಹಿಂದುತ್ವದ ದಲಿತ–ವಿರೋಧಿ




ವ್ಯಂಗಚಿತ್ರ ಕೃಪೆ: ಪಿ.ಮಹಮ್ಮದ್, ವಿಜಯಕರ್ನಾಟಕ

ಮನೋಧರ್ಮದ ದ್ಯೋತಕ. ಅಕ್ಲಖ್, ಜುನೈದ್, ಪೆಹ್ಲೂ ಖಾನ್ ಇವರುಗಳ ಬರ್ಬರ ಕೊಲೆ ಮುಸ್ಲಿಮರ ಮೇಲೆ ಬಿಜೆಪಿ ಹರಿಯಬಿಟ್ಟಿರುವ ದಮನಚಕ್ರದ ಪ್ರತೀಕಗಳು.

ಹಿಂದುತ್ವ ಅಜೆಂಡಾವನ್ನು ಕೇಂದ್ರ ಸರಕಾರ ಮೇಲಿನಿಂದ ಹೇರುತ್ತಿದ್ದರೆ, ಬುಡಮಟ್ಟದಲ್ಲಿ ಆರ್.ಎಸ್.ಎಸ್. ನೇತೃತ್ವದ ಹಿಂದುತ್ವ ಸಂಘಟನೆಗಳು ಮತ್ತು ಖಾಸಗಿ ಸೇನೆಗಳ ಹೆಸರಲ್ಲಿ ಬೆದರಿಕೆ ಹಾಕುವ, ಬಡಿದು ಸಾಯಿಸುವ ಮಂದೆಗಳ ದಾಳಿ ನಡೆಸಲು ಹರಿಯ ಬಿಡಲಾಗುತ್ತಿದೆ. ಕರ್ನಾಟಕದಲ್ಲಿ ಪ್ರೊ. ಎಂ.ಎಂ. ಕಲ್ಬುರ್ಗಿ ಮತ್ತು ಗೌರಿ ಲಂಕೇಶ್ ಕೊಲೆ ಇಂತಹ ಫ್ಯಾಸಿಸ್ಟ್ ಮಾದರಿ ದಾಳಿಗಳ ಭೀಕರ ಉದಾಹರಣೆಗಳು. ಸಂಸತ್ತಿನಲ್ಲಿ ವಿವಿಧ ಮಸೂದೆಗಳು ಮತ್ತು ಜನರನ್ನು ಬಾಧಿಸುವ ವಿಷಯಗಳ ಚರ್ಚೆಗೆ ಸತತ ನಿರಾಕರಣೆ; "ಹಣಕಾಸು ಮಸೂದೆ"ಯ ಕುತಂತ್ರ ಬಳಸಿ ರಾಜ್ಯಸಭೆಯ ಅಧಿಕಾರಗಳನ್ನು ಮೊಟಕುಗೊಳಿಸಿರುವುದು; ಎಲ್ಲಾ ಸಾಂವಿಧಾನಿಕ ಸಂಸ್ಥೆಗಳಲ್ಲಿ ಆರೆಸ್ಸೆಸ್ ಬೆಂಬಲಿಗರನ್ನು ನುಸುಳಿಸಿರುವುದು; ಸಿಬಿಐ, ಎನ್.ಐ.ಎ., ಇ.ಡಿ., ಮುಂತಾದ ಸಾಂವಿಧಾನಿಕ ಸಂಸ್ಥೆಗಳ ಸ್ವಾಯತ್ತತೆಗೆ ಭಂಗ ತಂದು ಅದನ್ನು ತನ್ನ ರಾಜಕೀಯ ಉದ್ದೇಶಗಳಿಗೆ ದುರ್ಬಳಕೆ – ಇವು ಸಂವಿಧಾನಾತ್ಮಕ ಪ್ರಜಾಪ್ರಭುತ್ವವನ್ನು ನಿರ್ಬಂಧಿಸುವ ಮೋದಿ ಸರಕಾರದ ಕ್ರಮಗಳ ಉದಾಹರಣೆಗಳು. ಇನ್ನೂ ಬಹಳ ಮಟ್ಟಿಗೆ ಜನತೆಯ ವಿಶ್ವಾಸಾರ್ಹತೆ ಉಳಿಸಿಕೊಂಡಿದ್ದ ಚುನಾವಣಾ ಕಮಿಶನ್ ಮತ್ತು ನ್ಯಾಯಾಂಗ ವ್ಯವಸ್ಥೆ (ಅದರಲ್ಲೂ ಸುಪ್ರೀಂ ಕೋರ್ಟು) ಸಹ ಅದನ್ನು ಮೋದಿ ಆಡಳಿತದಲ್ಲಿ ಕಳೆದುಕೊಳ್ಳುತ್ತಿವೆ. ಗುಜರಾತ್, ತ್ರಿಪುರಾ, ಬಂಗಾಳ ಚುನಾವಣೆಗಳಲ್ಲಿ ಚುನಾವಣಾ ಕಮಿಶನಿನ ಆಡಳಿತ ಪಕ್ಷ–ಪರ ಪಕ್ಷಪಾತ; ನ್ಯಾಯಾಧೀಶ ಲೋಯಾ ಅಸಹಜ ಸಾವಿನ ತನಿಖೆಗೆ ನಿರಾಕರಣೆ, ಗುಜರಾತ್ ಕೋಮು ದಂಗೆಗಳು, ಹುಸಿ ಎನ್ ಕೌಂಟರುಗಳಲ್ಲಿ, ಹಲವು ಭಯೋತ್ಪಾದನೆ ಪ್ರಕರಣಗಳಲ್ಲಿ ಬಿಜೆಪಿ–ಸಂಘ ಪರಿವಾರದ ನಾಯಕರ ಹಾಗೂ ಕಾರ್ಯಕರ್ತರ ಸರಣಿ ಖುಲಾಸೆಗಳು ಇದಕ್ಕೆ ಕಾರಣವಾಗಿವೆ. ತನ್ನ ಆಳ್ವಿಕೆ ಭ್ರಷ್ಟಾಚಾರ ಶೂನ್ಯವಾಗಿರುವುದೆಂಬ ಬಿಜೆಪಿ ಸರಕಾರದ ಜಂಭ ರ್‍ಯಾಫೆಲ್ ಯುದ್ಧವಿಮಾನ ವ್ಯವಹಾರದಲ್ಲಿ ಬಯಲಾಗಿದೆ. ಮಧ್ಯಪ್ರದೇಶದ ವ್ಯಾಪಂ ಹಗರಣದಿಂದ ಆರಂಭಿಸಿ ಮಹಾರಾಷ್ಟ್ರದ ಭೂ ಮತ್ತು ಚಿಕ್ಕಿ ಹಗರಣ, ರಾಜಸ್ಥಾನದಲ್ಲಿ ಗಣಿಗಾರಿಕೆ ಹಗರಣ ಮತ್ತು ಛತ್ತೀಸ್‌ಘರದ ಸಾರ್ವಜನಿಕ ವಿತರಣಾ ವ್ಯವಸ್ಥೆ ಹಗರಣದ ವರೆಗೆ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಭ್ರಷ್ಟಾಚಾರ ಹಗರಣಗಳು ತಾಂಡವವಾಡುತ್ತಿವೆ. ಅಮಿತ್ ಷಾರ ಮಗನ ಒಡೆತನದ ಕಂಪನಿಯ ಹಗರಣಕೋರ ವ್ಯವಹಾರ ಅದಕ್ಕೆ ಇನ್ನೊಂದು ಉದಾಹರಣೆ.

ಒಂದು ಕಡೆ ಭಾರತ ಜಗತ್ತಿನ ಸೂಪರ್ ಪವರ್ ಗಳಲ್ಲಿ ಒಂದು ಹೇಳುತ್ತಾ, ಇನ್ನೊಂದು ಕಡೆ ಭಾರತದ ವ್ಯೂಹಾತ್ಮಕ ಹಿತಾಸಕ್ತಿಗಳಿಗೆ ಭಂಗ ತರುವ, ಮೂರನೇ ಜಗತ್ತಿನ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುವ ಸಹಜ ನಾಯಕತ್ವ ಮತ್ತು ಬಹುಧ್ರುವೀಯ ಜಗತ್ತಿನಲ್ಲಿ ಭಾರತದ ಸ್ವತಂತ್ರ ಅಂತರ್ರಾಷ್ಟ್ರೀಯ ಘನತೆಗೆ ಕುಂದು ತರುವ ರೀತಿಯಲ್ಲಿ, ಅಮೆರಿಕದ ಜೂನಿಯರ್ ಪಾರ್ಟನರ್ ಆಗಿಸುವ ವಿದೇಶಾಂಗ ನೀತಿಯನ್ನು ರೂಪಿಸಿದೆ. ಮೋದಿ ಆಡಳಿತದ ವಿದೇಶಾಂಗ ನೀತಿಯ ಫಲವಾಗಿ, ದಕ್ಷಿಣ ಏಶ್ಯಾದ ನಾಯಕತ್ವ

ವಹಿಸುವ ಬದಲು ನೆರೆಹೊರೆಯ ಎಲ್ಲಾ ದೇಶಗಳ ಜತೆ ಘರ್ಷಣೆ, ಕಹಿ ಸಂಬಂಧ ಹೆಚ್ಚುತ್ತಿದೆ.

## ಬಿಜೆಪಿಯ ಡೆಡ್ ಬಾಡಿ ಪೊಲಿಟಿಕ್ಸ್

ರಾಜ್ಯದಲ್ಲಿ ಬಿಜೆಪಿಯ ಹಿಂದಿನ ಅಧಿಕಾರಾವಧಿಯಾಗಲಿ, ಕಳೆದ 5 ವರ್ಷಗಳಲ್ಲಿ ವಿರೋಧ ಪಕ್ಷವಾಗಿ ಅದರ ರೆಕಾರ್ಡು ಆಗಲಿ, ತೀವ್ರ ವೈಫಲ್ಯಗಳ ಸರಣಿಯೇ. 2008ರ ಚುನಾವಣೆಯಲ್ಲಿ ಬಹುಮತ ಸಿಗದೆ ಬಳ್ಳಾರಿ ಗಣಿಧಣಿಗಳ ದುಡ್ಡಿನ ಅನೈತಿಕ “ಆಪರೇಷನ್ ಕಮಲ”ದಿಂದ ಅಧಿಕಾರಕ್ಕೆ ಬಂದು, ಅದರ ಬಲದಿಂದಲೇ ಅಧಿಕಾರಕ್ಕೆ ಅಂಟಿಕೊಂಡಿದ್ದು, ಕರ್ನಾಟಕದ ಚರಿತ್ರೆಯಲ್ಲೇ ನಂಬರ್ 1 ಭ್ರಷ್ಟಾಚಾರಿ ಸರ್ಕಾರವಾಗಿತ್ತು. ಅಧಿಕಾರಕ್ಕಾಗಿ ಸತತ ಕಚ್ಚಾಟ, ಮುಖ್ಯಮಂತ್ರಿ ಸೇರಿ 7 ಮಂತ್ರಿಗಳು ಭ್ರಷ್ಟಾಚಾರದ ಪ್ರಕರಣಗಳಲ್ಲಿ ಜೈಲಿಗೆ ಹೋಗಿದ್ದು, 3 ಮುಖ್ಯಮಂತ್ರಿಗಳು ಬದಲಾಗಿ ಸತತ ಅಭದ್ರತೆ ಕಾಡಿದ, ಮುಸ್ಲಿಮರು–ಕ್ರಿಶ್ಚಿಯನ್ನರ ಮೇಲೆ ಹಿಂಸಾತ್ಮಕ ದಾಳಿಗಳು, ರೈತ–ಕಾರ್ಮಿಕರಿಗೆ ದ್ರೋಹ, ಮಹಿಳೆ–ದಲಿತರ ಮೇಲೆ ದೌರ್ಜನ್ಯಗಳ ಹೆಚ್ಚಳ, ಅಭಿವೃದ್ಧಿಗೆ ತಿಲಾಂಜಲಿ– ಇವುಗಳಿಂದ ಗುರುತಿಸಲ್ಪಟ್ಟ ಕರ್ನಾಟಕದ ಚರಿತ್ರೆಯಲ್ಲೇ ಕರಾಳ ಅಧ್ಯಾಯವಾಗಿದ್ದ ಸರಕಾರವಾಗಿತ್ತು.

ತನ್ನ ಕುಕೃತ್ಯಗಳಿಂದ ಅಧಿಕಾರ ಕಳೆದುಕೊಂಡು ವಿರೋಧ ಪಕ್ಷವಾದ ಬಿಜೆಪಿ, ಕಳೆದ 5 ವರ್ಷಗಳಲ್ಲಿ ಆ ಜವಾಬ್ದಾರಿಯನ್ನು ಸಹ ನಿರ್ವಹಿಸಲಿಲ್ಲ. ರೈತ ಕಾರ್ಮಿಕರ ಸಮಸ್ಯೆಗಳು, ಮಹದಾಯಿ–ಕಾವೇರಿ ಸಮಸ್ಯೆ ಪರಿಹಾರಕ್ಕೆ ಕೇಂದ್ರದ ಮಧ್ಯಪ್ರವೇಶ, ರಾಜ್ಯದ ಯೋಜನೆ ಅನುದಾನಗಳಲ್ಲಿ ಕಡಿತ, ಅಭಿವೃದ್ಧಿಯ ವಿಷಯಗಳು – ಇವು ಯಾವುದರ ಬಗ್ಗೆ ಬಿಜೆಪಿ ತಲೆ ಕೆಡಿಸಿಕೊಳ್ಳಲಿಲ್ಲ. ಕೋಮು–ಧ್ರುವೀಕರಣ, ಕರಾವಳಿಯಲ್ಲಿ ಗೋಹತ್ಯೆಗಾಗಿ ಸಾಗಾಣಿಕೆ, ಲವ್–ಜಿಹಾದ್, ಮತಾಂತರ, ಹಿಂದೂ ಸಂಸ್ಕೃತಿಗೆ ಅಪಾಯ ಮುಂತಾದ ನೆಪಗಳಲ್ಲಿ ಸಂಘ ಪರಿವಾರದ ಖಾಸಗಿ




ವ್ಯಂಗಚಿತ್ರ ಕೃಪೆ: ಪಿ.ಮಹಮ್ಮದ್, ವಿಜಯಕರ್ನಾಟಕ

ಸೈನ್ಯದಿಂದ ಕೋಮು ಹಿಂಸಾಚಾರ ಅವ್ಯಾಹತವಾಗಿ ಮುಂದುವರೆದಿವೆ. "ಹಿಂದೂ ಕಾರ್ಯಕರ್ತರ ಮೇಲೆ ದಾಳಿ–ಕೊಲೆ" ಮತ್ತಿತರ ಹುಸಿ ಕಾನೂನು–ಸುವ್ಯವಸ್ಥೆ ಸಮಸ್ಯೆ ಸೃಷ್ಟಿಸಿ ಅದರ ಬಗ್ಗೆ ಹುಯಿಲಿಡುವ "ಡೆಡ್ ಬಾಡಿ ಪೊಲಿಟಿಕ್ಸ್", ಕರ್ನಾಟಕದ "ಯೋಗಿ" ಅಗುವ ಕನಸು ಕಾಣುತ್ತಿರುವ ಕೇಂದ್ರ ಮಂತ್ರಿಯೊಬ್ಬರು ಸಂವಿಧಾನ ಬದಲಾಯಿಸುವ ಮುಂತಾದ ಬಿಜೆಪಿ ಶಾಸಕರ–ನಾಯಕರ ಉದ್ರೇಕಕಾರಿ ಹೇಳಿಕೆಗಳು – ಮುಂತಾದಗಳಲ್ಲೇ ಮಗ್ನವಾದ ಬಿಜೆಪಿ ವಿರೋಧ ಪಕ್ಷದ ಪ್ರಾಮಾಣಿಕ ಪಾತ್ರವನ್ನೂ ವಹಿಸಲಿಲ್ಲ.

ಜನ–ವಿರೋಧಿ ನವ–ಉದಾರವಾದಿ ನೀತಿಗಳನ್ನು ಅತ್ಯಂತ ಆಕ್ರಾಮಕ ರೀತಿಯಲ್ಲಿ ಜಾರಿ ಮಾಡುತ್ತಾ, ಜನರ ಮೇಲೆ ಸರ್ವತೋಮುಖ ಪ್ರಹಾರಗಳನ್ನು ಮಾಡುತ್ತಾ, ಪ್ರಜಾಪ್ರಭುತ್ವ ವ್ಯವಸ್ಥೆಯ ಎಲ್ಲಾ ಸಂಸ್ಥೆಗಳ ಮೇಲೆ ದಾಳಿ ಮಾಡುತ್ತಾ, ಸಂವಿಧಾನದ ಆಶಯಗಳನ್ನು ಗಾಳಿಗೆ ತೂರಿ ಖಾಸಗಿ ಸೈನ್ಯಗಳ ಹಿಂಸಾಚಾರದಿಂದ ಆಳುತ್ತಾ, ಹಿಂದೂ ರಾಷ್ಟ್ರ ಸ್ಥಾಪನೆಯತ್ತ ಭರದಿಂದ ಸಾಗುತ್ತಿರುವ, ರಾಜ್ಯದಲ್ಲೂ ಅತ್ಯಂತ ಬೇಜವಾಬ್ದಾರಿ ರಾಜಕಾರಣ ನಡೆಸುತ್ತಿರುವ ಬಿಜೆಪಿಯನ್ನು, ರಾಜ್ಯದಲ್ಲಿ ಸೋಲಿಸಿ ಅದರ ಮುನ್ನಡೆಯನ್ನು ತಡೆಯುವುದು ದುರ್ಬಲಗೊಳಿಸುವುದು ಆದ್ಯತೆಯ ಕೆಲಸ ಎಂಬುದರ ಬಗ್ಗೆ ಅನುಮಾನವಿಲ್ಲ.

ಬಿಜೆಪಿ ಒಂದು ವಿಭಜನಕಾರಿ ಪ್ರತಿಗಾಮಿ ಪಕ್ಷ. ಅದರ ಹೂರಣ ಇತರ ಧರ್ಮಗಳ ವಿರುದ್ಧ ದ್ವೇಷ, ಅಸಹನೆ ಮತ್ತು ಉಗ್ರ–ರಾಷ್ಟ್ರವಾದಿ ಸಂಕುಚಿತವಾದ. ಬಿಜೆಪಿ ಒಂದು ಸಾಧಾರಣ ಬೂರ್ಜ್ವಾ ಪಕ್ಷವೇನಲ್ಲ, ಏಕೆಂದರೆ ಫ್ಯಾಸಿಸ್ಟ್ ಮಾದರಿಯ ರಾಷ್ಟ್ರೀಯ ಸ್ವಯಂಸೇವಕ ಸಂಘ ಅದಕ್ಕೆ ಮಾರ್ಗದರ್ಶನ ನೀಡುತ್ತಿದೆ ಮತ್ತು ಅದರ ಮೇಲೆ ಪ್ರಭಾವ ಹೊಂದಿದೆ. ಬಿಜೆಪಿ ಅಧಿಕಾರದಲ್ಲಿರುವಾಗ ಆರ್.ಎಸ್.ಎಸ್‌ಗೆ ಪ್ರಭುತ್ವ ಅಧಿಕಾರದ ಪ್ರಭುತ್ವ ಯಂತ್ರದ ಸಾಧನಗಳು ಲಭ್ಯವಾಗುತ್ತವೆ. ಬಿ.ಜೆ.ಪಿ. ಫ್ಯಾಸಿಸ್ಟ್ ಮಾದರಿಯ ಆರ್.ಎಸ್.ಎಸ್ ನಿಂದಲೇ ನಡೆಸಲ್ಪಡುತ್ತಿದ್ದು ಅದರ ನಿಯಂತ್ರಣದಲ್ಲೇ ಇದೆ.

**ಆದ್ದರಿಂದ,**

**ಪ್ರಜಾಪ್ರಭುತ್ವದ ಉಳಿವಿಗಾಗಿ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಲು, ಸೌಹಾರ್ದ ಕರ್ನಾಟಕ ಉಳಿಸಲು, ಜನ–ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಬಿಜೆಪಿ ಅಭ್ಯರ್ಥಿಗಳನ್ನು ಸೋಲಿಸಬೇಕೆಂದು ಸಿಪಿಐ(ಎಂ) ಕರ್ನಾಟಕದ ಮತದಾರರಿಗೆ ಕರೆ ನೀಡುತ್ತದೆ.**

## ನುಡಿದಂತೆ ನಡೆಯದ ಕಾಂಗ್ರೆಸ್ ಸರಕಾರ

ಬಿಜೆಪಿ ಸರಕಾರದ ದುರಾಡಳಿತ, ಭ್ರಷ್ಟಾಚಾರ, ಕೋಮುವಾದೀಕರಣದಿಂದ ಬೇಸತ್ತ ಕರ್ನಾಟಕದ ಜನತೆ 2013 ರ ಚುನಾವಣೆಯಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ಸನ್ನು ಆರಿಸಿದರು. ಮುಖ್ಯಮಂತ್ರಿಯಾಗಿ ಅವರು ಪ್ರಮಾಣ ವಚನ ಸ್ವೀಕರಿಸಿದ ದಿನವೇ ರಾಜ್ಯದ ಬಿಪಿಎಲ್ ಕುಟುಂಬಗಳಿಗೆ ತಿಂಗಳಿಗೆ 30 ಕೆಜಿ ಅಕ್ಕಿಯನ್ನು ಕೆಜಿಗೆ 1 ರೂ. ದರದಲ್ಲಿ ಕೊಡುವುದಾಗಿ ನೀಡಿದ ಘೋಷಣೆ ಜಾರಿಗೆ ಬಂದಾಗ ರಾಜ್ಯದ ಬಡಜನರಲ್ಲಿ ಹೊಸ ನಿರೀಕ್ಷೆಗಳನ್ನು ಮೂಡಿಸಿದ್ದು ಸುಳ್ಳಲ್ಲ. ಆದರೆ, ಇದೇ ಸಿದ್ದರಾಮಯ್ಯನವರು ತಿಂಗಳಿಗೆ 30 ಕೆ.ಜಿ. ಅಕ್ಕಿಯನ್ನು ವಿತರಿಸುವ ಕಾರ್ಯಕ್ರಮವನ್ನು ಕೈಬಿಟ್ಟು ವ್ಯಕ್ತಿಗೆ 5 ಕೆ.ಜಿ. ಅಕ್ಕಿ/ಗೋದಿಯನ್ನು ಉಚಿತವಾಗಿ ಕೊಡುವ ಕಾರ್ಯಕ್ರಮವನ್ನು ಜಾರಿಗೆ ತಂದಾಗ ರಾಜ್ಯದ ಜನತೆಗೆ ನುಡಿದಂತೆ ನಡೆಯದ ಸರಕಾರದ ಮೊದಲ ಅನುಭವವಾಯಿತು.

ಬರ ಪರಿಹಾರದ ಕುಡಿಯುವ ನೀರು ಒದಗಿಸುವುದು, ತಕ್ಷಣದ ಕ್ರಮಗಳು, ಜನ ಗುಳೆ ಹೋಗದಂತೆ ಯುದ್ಧೋಪಾದಿ ರೇಗಾ ಕೆಲಸ ಒದಗಿಸುವುದು, ಬರ ಪೀಡಿತ ಪ್ರದೇಶಗಳಿಗೆ ಶಾಶ್ವತ ನೀರಾವರಿ ಒದಗಿಸುವ ದೂರಗಾಮಿ ಯೋಜನೆಗಳು – ಮುಂತಾದ ಬರ ನಿರ್ವಹಣೆಯ ಎಲ್ಲಾ ಕೆಲಸಗಳಲ್ಲಿ ಸರಕಾರ ವಿಫಲವಾಗಿದೆ. ಸಹಕಾರ ಬ್ಯಾಂಕಿನ 50 ಸಾವಿರ ರೂ. ವರೆಗಿನ ಸಾಲ ಮನ್ನಾ ಮಾಡಿದ್ದರೂ ರೈತರ ಆತ್ಮಹತ್ಯೆಗಳನ್ನು ತಡೆಯುವುದರಲ್ಲಿ ವಿಫಲವಾಗಿದೆ. ಕೇಂದ್ರದ ಮೋದಿ ನೇತೃತ್ವದ ಬಿಜೆಪಿ ಸರ್ಕಾರದಂತೆಯೇ ರಾಜ್ಯ ಕಾಂಗ್ರೆಸ್ ಸರ್ಕಾರವೂ ಸಹ ಕಾರ್ಪೊರೇಟ್ ಬಂಡವಾಳವನ್ನು ಅದರಲ್ಲೂ ವಿದೇಶಿ ಹೂಡಿಕೆಯನ್ನು ಅವಲಂಬಿಸುವ ಕೈಗಾರಿಕಾ ನೀತಿಯನ್ನು ಅನುಸರಿಸುತ್ತಾ ಬಂದಿದ್ದು, ಹೊಸ ಕೈಗಾರಿಕೆಯ ಸ್ಥಾಪನೆ ಮತ್ತು ಉದ್ಯೋಗ ಸೃಷ್ಟಿಯಾಗಿಲ್ಲ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸುಮಾರು 2 ಲಕ್ಷ ಹುದ್ದೆಗಳು ಖಾಲಿ



ವ್ಯಂಗಚಿತ್ರ ಕೃಪೆ: ಪಿ.ಮಹಮ್ಮದ್, ವಿಜಯಕರ್ನಾಟಕ

ಇದ್ದರೂ ನೇಮಕಾತಿ ನಿರ್ಬಂಧ ಮುಂದುವರೆದಿರುವುದು, ಸ್ಕೀಮ್ ವರ್ಕರ್ಸ್ ಎಂದು ಕರೆಯಲ್ಪಡುವ ಅಂಗನವಾಡಿ, ಆಶಾ, ಬಿಸಿಯೂಟ ಕೆಲಸಗಾರರನ್ನು ಕಾರ್ಮಿಕರೆಂದು ಪರಿಗಣಿಸಿ ಅವರಿಗೆ ಕನಿಷ್ಠ ವೇತನ ಕೊಡದಿರುವುದು, ಸರ್ವೋಚ್ಛ ನ್ಯಾಯಾಲಯದ ನಿರ್ದೇಶನದ ಪ್ರಕಾರ ಗುತ್ತಿಗೆ ಮತ್ತು ಇತರ ಖಾಯಮೇತರ ನೌಕಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿ ಮಾಡದಿರುವುದು, ರೂ. 18 ಸಾವಿರ ಕನಿಷ್ಟ ಕೂಲಿ ಜಾರಿ ಮಾಡದಿರುವುದು – ಕಾಂಗ್ರೆಸ್ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ಬದಲಾಗಿಲ್ಲ ಎಂಬುದಕ್ಕೆ ಉದಾಹರಣೆಗಳು. ಸರಕಾರವನ್ನೇ ನಿಯಂತ್ರಿಸುವಷ್ಟು ಪ್ರಬಲವಾಗಿರುವ ಖಾಸಗಿ ಲಾಬಿಯಿಂದಾಗಿ ಶಿಕ್ಷಣ ಮತ್ತು ಆರೋಗ್ಯ ಬಡವರ ನಿಲುಕಿನಿಂದ ಹೊರಗೆ ಹೋಗುತ್ತಿದೆ.

ರಾಜ್ಯದಲ್ಲಿ ಹಿಂದುತ್ವ ಶಕ್ತಿಗಳ ಆಕ್ರಮಣಕಾರಿ ಆರ್ಭಟಕ್ಕೆ ನಿಯಂತ್ರಣ ಬಿದ್ದಿಲ್ಲ. ಈ ಅವಧಿಯಲ್ಲಿ ಕರಾವಳಿ ಜಿಲ್ಲೆಗಳಲ್ಲಿ, ಕೊಡಗಿನಲ್ಲಿ, ತೀರ್ಥಹಳ್ಳಿಯಲ್ಲಿ, ಶಿವಮೊಗ್ಗದಲ್ಲಿ ಮತ್ತು ಇತ್ತೀಚೆಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಗಲಭೆಗಳ್ನು ಉಂಟುಮಾಡುವ ಪ್ರಯತ್ನಗಳಾಗಿವೆ. ಬಿಜೆಪಿ ಬಹಿರಂಗವಾಗಿ ಗಲಭೆಕೋರ ಶಕ್ತಿಗಳ ಪರವಾಗಿ ನಿಂತಿದೆ. ಕ್ರಿಶ್ಚಿಯನ್ ಮತ್ತು ಮುಸ್ಲಿಂ ಪ್ರಾರ್ಥನಾ ಸ್ಥಳಗಳ ಮೇಲೆ ದಾಳಿ ನಡೆಸಲಾಗಿದೆ. ಈ ಎಲ್ಲಾ ಸಂದರ್ಭಗಳಲ್ಲಿ ಸರ್ಕಾರ ತಕ್ಷಣದಲ್ಲಿ ದೃಢವಾದ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ. ಕಾಂಗ್ರೆಸ್ ಸರಕಾರ ಬಿಜೆಪಿ–ಸಂಘಪರಿವಾರದ ಕೋಮುವಾದಿ ಸವಾಲನ್ನು ರಾಜಕೀಯವಾಗಿಯೂ ಆಡಳಿತಾತ್ಮಕವಾಗಿಯೂ ಎದುರಿಸುವುದರಲ್ಲಿ ಪೂರ್ಣವಾಗಿ ಸೋತಿದೆ. ರಾಜ್ಯದಲ್ಲಿ ಮಹಿಳೆಯರು, ದಲಿತರು, ಮುಸ್ಲಿಮರ ಮೇಲಿನ ಅತ್ಯಾಚಾರಗಳು, ಕೊಲೆಗಳು, ಹಲ್ಲೆಗಳು ಅವ್ಯಾಹತವಾಗಿ ನಡೆಯುತ್ತಿದ್ದು ಅವುಗಳನ್ನು ತಡೆಗಟ್ಟುವಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ. ಗಣಿಧಣಿಗಳ ವಿರುದ್ಧ ಹೋರಾಟದಲ್ಲಿ ಅಧಿಕಾರಕ್ಕೆ ಬಂದ ಸಿದ್ಧರಾಮಯ್ಯ ಸರಕಾರ ಕಾಲಹರಣ ಮಾಡಿ ಸಂತೋಷ ಹೆಗಡೆ ವರದಿಯ ಜಾರಿಯಿಂದ





ವ್ಯಂಗಚಿತ್ರ ಕೃಪೆ: ಪಿ.ಮಹಮ್ಮದ್, ವಿಜಯಕರ್ನಾಟಕ





ವ್ಯಂಗಚಿತ್ರ ಕೃಪೆ: ಪಿ.ಮಹಮ್ಮದ್, ವಿಜಯಕರ್ನಾಟಕ

ಜಾರಿಕೊಂಡಿತು. ಅರ್ಕಾವತಿ ಡಿನೋಟಿಫಿಕೇಷನ್, 120 ಭ್ರಷ್ಟ ಅಧಿಕಾರಿಗಳ ಮೇಲೆ ಶ್ತಿನ ಕ್ರಮ ಜರುಗಿಸದೆ ಇರುವುದು, ಲೋಕಾಯುಕ್ತ ವ್ಯವಸ್ಥೆಯನ್ನು ದುರ್ಬಲ ಗೊಳಿಸಿರುವುದು, ಹಾಸ್ಟೆಲ್ ಹಾಸಿಗೆ-ದಿಂಬು ಹಗರಣ – ಇವುಗಳಿಂದ ಕಾಂಗ್ರೆಸಿನ 'ಭ್ರಷ್ಟಾಚಾರ-ವಿರೋಧಿ" ಪೋಸು ಬಯಲಾಗಿದೆ. ರಾಜಕೀಯ ಕೊಲೆಗಳು, ಮಹಿಳೆಯರ ಕೊಲೆಗಳು, ಮಹಿಳೆಯರ, ಮಕ್ಕಳ ಅಪಹರಣ ಪ್ರಕರಣಗಳಲ್ಲಿ ಅಪರಾಧಿಗಳನ್ನು ಪತ್ತೆಹಚ್ಚುವಲ್ಲಿ ವಿಳಂಬ; ಮಂತ್ರಿಗಳು, ಶಾಸಕರುಗಳಿಂದ ಅಪರಾಧಿಗಳಿಗೆ ರಕ್ಷಣೆ; ಡಾ. ಎಂ.ಎಂ. ಕಲ್ಬುರ್ಗಿ ಮತ್ತು ಗೌರಿ ಲಂಕೇಶ್ ಅವರ ಕೊಲೆ ನಡೆದು ದೀರ್ಘ ಕಾಲದ ನಂತರವೂ ಹಂತಕರನ್ನು ಬಂಧಿಸಲಾಗದಿದ್ದದ್ದು – ಹದಗೆಟ್ಟ ಕಾನೂನು ವ್ಯವಸ್ಥೆಯತ್ತ ಬೊಟ್ಟು ಮಾಡುತ್ತವೆ. ಮಹದಾಯಿ ಗಂಭೀರ ಅಂತರ-ರಾಜ್ಯ ವಿವಾದವಾಗಿ ಕಗ್ಗಂಟಾಗಿದ್ದರಲ್ಲಿ, ಇದನ್ನು ಪರಿಹರಿಸುವ ರಾಜಕೀಯ ದೃಢತನ ತೋರದ ಕಾಂಗ್ರೆಸಿನ ಆಡಳಿತಾತ್ಮಕ ವೈಫಲ್ಯಗಳೂ ರಾಜಕೀಯ ಅವಕಾಶವಾದಿತನದ ಪಾಲೂ ಇದೆ.

ಕಾಂಗ್ರೆಸ್ ಸಹ ದೊಡ್ಡ ಬಂಡವಾಳಶಾಹಿ-ಭೂಮಾಲಕ ವರ್ಗಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತದೆ. ಕಳೆದ 25ಕ್ಕೂ ಹೆಚ್ಚು ವರ್ಷಗಳಿಂದ ಜನತೆಯನ್ನು ತೀವ್ರವಾಗಿ ಬಾಧಿಸುತ್ತಿರುವ ಜನ-ವಿರೋಧಿ ನವ ಉದಾರವಾದಿ ಕಾರ್ಯಸೂಚಿಯ ಪ್ರವರ್ತಕ ಕಾಂಗ್ರೆಸ್. ನೋಟು ನಿಷೇಧ ಬಿಟ್ಟರೆ ಬಿಜೆಪಿ ಕೇಂದ್ರ ಸರಕಾರ ಅನುಸರಿಸುತ್ತಿರುವ ಹೆಚ್ಚು ಕಡಿಮೆ ಎಲ್ಲಾ ನೀತಿಗಳನ್ನು ಆರಂಭಿಸಿದ್ದು ಕಾಂಗ್ರೆಸ್ ಸರಕಾರಗಳೇ. ಬಿಜೆಪಿ ಅದನ್ನು ಹೆಚ್ಚು ಆಕ್ರಾಮಕವಾಗಿ ಕ್ರೂರವಾಗಿ ಜಾರಿ ಮಾಡುತ್ತಿದೆ. ಈಗಲೂ ಕಾಂಗ್ರೆಸ್ ಈ ನೀತಿಗಳನ್ನು ಪ್ರತಿಪಾದಿಸುವುದನ್ನು ಮುಂದುವರೆಸಿದೆ. ಬಿಜೆಪಿಯಂತಹ ಒಂದು ಪಕ್ಷ ಬೆಳೆದು ಅಧಿಕಾರಕ್ಕೆ ಬಂದಿದ್ದು ಕಾಂಗ್ರೆಸ್ ನೀತಿಗಳು ದೇಶದಲ್ಲಿ ನಿರ್ಮಿಸಿದ ಪರಿಸ್ಥಿತಿಯಿಂದಾಗಿಯೇ. ಆದ್ದರಿಂದ ಕಾಂಗ್ರೆಸ್ ಈ ನೀತಿಗಳನ್ನು ಬದಲಾಯಿಸದೆ ಜನ-ಪರ ಪರ್ಯಾಯವಾಗುವುದು ಸಾಧ್ಯವಿಲ್ಲ.


ಕರ್ನಾಟಕ ವಿಧಾನಸಭಾ ಚುನಾವಣೆ - 2018
VOTE CPI(M)
ಎಂ.ಎಸ್.ಹಡಪದ್
ರೋಣ
67
ಗೈಬು ಜೈನೇ ಖಾನ್
ರಾಮದುರ್ಗ
18
ಯಮುನಾ ಗಾಂವ್ಕರ್
ಹಳಿಯಾಳ
76
ಸುರೇಶ್ ಕಲ್ಲಾಗರ
ಬೈಂದೂರು
118
ಯಾದವ ಶೆಟ್ಟಿ
ಮೂಡಬಿದಿರೆ
201
ಮುನೀರ್ ಕಾಟಿಪಳ್ಳ
ಮಂಗಳೂರು ಉತ್ತರ
202
ಸುನೀಲ್ ಕುಮಾರ್ ಬಜಾಲ್
ಮಂಗಳೂರು ದಕ್ಷಿಣ
203
ನಿತಿನ್ ಕುತ್ತಾರ್
ಮಂಗಳೂರು
204
ಬೆಳಗಾಂ
ಗದಗ
ಕೊಪ್ಪಳ
ಉತ್ತರ ಕನ್ನಡ
ಉಡುಪಿ
ದಕ್ಷಿಣ ಕನ್ನಡ
BELGAUM
BIJAPUR
BAGALKOT
DHARWAD
HAVERI
DAVANGERE
SHIMOGA
CHITRADURGA
CHIKMAGALUR
HASSAN
DAKSHIN KANNADA
KODAGU
MYSORE
MANDYA
200-Belthangady
206-Puttur
207-Sullia (SC)
ಕೋಮುವಾದ-


ಸಿಪಿಐ(ಎಂ) ಪಕ್ಷದ ಅಭ್ಯರ್ಥಿಗಳು
ಮಾರುತಿ ಮಾನಪಡೆ
ಕಲಬುರಗಿ ಗ್ರಾಮೀಣ(ಮೀ)
43
ಜಿ.ನಾಗರಾಜ್
ಗಂಗಾವತಿ
62
ವಿ.ಎಸ್.ಶಿವಶಂಕರ್
ಕಂಪ್ಲಿ(ಮೀ)
91
ಜಿ.ವಿ.ಶ್ರೀರಾಮರೆಡ್ಡಿ
ಬಾಗೇಪಲ್ಲಿ
140
ಬಿ.ಮಾಳಮ್ಮ
ಹಗರಿಬೊಮ್ಮನಹಳ್ಳಿ (ಮೀ)
89
ರವಿಚಂದ್ರ ರೆಡ್ಡಿ
ಗೌರಿಬಿದನೂರು
139
ಪಿ.ಆರ್.ಸೂರ್ಯನಾರಾಯಣ
ಶ್ರೀನಿವಾಸಪುರ
144
ತಂಗರಾಜ್
ಕೆ.ಜಿ.ಎಫ್ (ಮೀ)
146
ಪ್ರತಾಪ್ ಸಿಂಹ
ದಾಸರಹಳ್ಳಿ
155
ಹೆಚ್.ಎನ್.ಗೋಪಾಲಗೌಡ
ಕೃಷ್ಣರಾಜಪುರ
151
ಡಿ.ಮಹದೇಶ್
ಆನೇಕಲ್(ಮೀ)
177
ಕಲಬುರಗಿ
BIDAR
YADGIR
ಚಿಕ್ಕಬಳ್ಳಾಪುರ
ಕೋಲಾರ
ಬೆಂಗಳೂರು
CHICKBULAPUR
BANGALORE RURAL
-ಮುಕ್ತ, ಜನಪರ ಅಭಿವೃದ್ಧಿಗಾಗಿ... ಸಿಪಿಐ(ಎಂ) ಗೆ ನಿಮ್ಮ ಮತ



ವ್ಯಂಗಚಿತ್ರ ಕೃಪೆ: ಪಂಜು ಗಂಗೊಳ್ಳಿ

## ಜೆಡಿ(ಎಸ್) ವಿಶ್ವಾಸಾರ್ಹ ಪರ್ಯಾಯ ಅಲ್ಲ

ಅಧಿಕಾರದ ಕನಸು ಕಾಣುತ್ತಿರುವ ಜೆಡಿ(ಎಸ್) ಒಂದು ವಿಶ್ವಾಸಾರ್ಹ ಪಕ್ಷವಾಗಿ ಉಳಿದಿಲ್ಲ. ಕಾಂಗ್ರೆಸಾಗಲಿ, ಬಿಜೆಪಿಯಾಗಲಿ ಅನುಸರಿಸುತ್ತಿರುವ ಜನ–ವಿರೋಧಿ ನವ–ಉದಾರವಾದಿ ನೀತಿಗಳ ವಿಷಯದಲ್ಲಿ ಜೆಡಿಎಸ್‌ಗೆ ಯಾವ ತಕರಾರು ಇಲ್ಲ. ಅದರ ಕಾರ್ಯಾಧ್ಯಕ್ಷರು ಒಂದು ಬಾರಿ ಜಾತ್ಯತೀತತೆ ಎಂದರೇನು ಎಂದು ಕೇಳುವ ಮೂಲಕ ಅದೂ ಈ ಪಕ್ಷದ ಗುರುತು ಅಲ್ಲ ಎಂದು ಸ್ಪಷ್ಟ ಪಡಿಸಿದ್ದರು. ಬಿಜೆಪಿ ಜತೆ ಮೈತ್ರಿಕೂಟದಲ್ಲಿ ಸರಕಾರ ಮಾಡಿ ಪ್ರಾಯೋಗಿಕವಾಗಿಯೂ ಜಾತ್ಯತೀತತೆ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ ಎಂದು ತೋರಿಸಿಕೊಟ್ಟಿದೆ. ರಾಷ್ಟ್ರೀಯ ಪಕ್ಷಗಳು ಕರ್ನಾಟಕದ ಹಿತವನ್ನು ಕಾಯಲಾರವು. ತನ್ನಂತಹ ಪ್ರಾದೇಶಿಕ ಪಕ್ಷ ಮಾತ್ರ ಅದನ್ನು ಮಾಡಬಲ್ಲುದು ಎಂದು ಅದು ವಾದಿಸುತ್ತದೆ. ಆದರೆ ಒಕ್ಕೂಟವಾದದ ಅಥವಾ ರಾಜ್ಯದ ಭಾಷೆ–ಸಂಸ್ಕೃತಿಗಳ ಮೇಲೆ ಪ್ರಹಾರಗಳ ಬಗೆಗಾಗಲಿ ಈ ಪಕ್ಷ ಇದು ವರೆಗೆ ಚಕಾರವೆತ್ತಿಲ್ಲ. ಕಾಂಗ್ರೆಸ್ ಮತ್ತು ಬಿಜೆಪಿ ಜತೆ ಜಂಟಿ ಸರಕಾರ ರಚಿಸಿ ಹೇಗಾದರೂ ಅಧಿಕಾರ–ಗ್ರಹಣ ಒಂದೇ ಅದರ ನೀತಿ ಎಂದೂ ತೋರಿಸಿಕೊಟ್ಟಿದೆ. ಕಾಂಗ್ರೆಸ್ ಮತ್ತು ಬಿಜೆಪಿಗಳಲ್ಲೂ ಕುಟುಂಬ ರಾಜಕಾರಣ ವ್ಯಾಪಕವಾಗಿದ್ದು, ಅವರಿಗೆ ಜೆಡಿ(ಎಸ್) ಪಕ್ಷವನ್ನು 'ಅಪ್ಪ–ಮಕ್ಕಳ ಪಕ್ಷ' ಎಂದು ಕರೆಯಲು ಹಕ್ಕು ಇಲ್ಲ. ಆದರೆ ಕರ್ನಾಟಕದಲ್ಲಿ ಜೆಡಿ(ಎಸ್) ಬೇರೆ ಯಾವುದೇ ಪಕ್ಷಕ್ಕಿಂತ ಹೆಚ್ಚು ಕುಟುಂಬ–ಆಧಾರಿತ ಪಕ್ಷವಾಗಿದೆ ಎಂಬುದು ನಿಜ. ಅದರ ನೀತಿ–ಹೀನತೆಯಿಂದ ಮತ್ತು ಸಮಯ ಸಾಧಕತನದಿಂದ ರಾಜ್ಯದಲ್ಲಿ ಕಾಂಗ್ರೆಸಿಗೆ ಮತ್ತು ಬಿಜೆಪಿಗೆ ಪರ್ಯಾಯವಾಗಿ ಬೆಳೆದು ಬರಲು ಇರುವ ಅವಕಾಶವನ್ನು ಅದು ಕಳೆದುಕೊಂಡಿದೆ. ಆದ್ದರಿಂದ ಕಾಂಗ್ರೆಸ್ ಮತ್ತು ಬಿಜೆಪಿಗಳಿಗೆ ಇದು ಪರ್ಯಾಯವಾಗಲಾರದು.

# ಧೋರಣೆಗಳ ಪರ್ಯಾಯ ಎಡ ಪಕ್ಷಗಳಿಂದ ಮಾತ್ರ ಸಾಧ್ಯ

ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಪಕ್ಷಗಳು ಬಂಡವಾಳಗಾರ ಮತ್ತು ಜಮಿನ್ದಾರ ವರ್ಗಗಳ ಪಕ್ಷಗಳಾಗಿರುವುದರಿಂದ ಅವುಗಳ ಧೋರಣೆಯಲ್ಲಿ ವ್ಯತ್ಯಾಸ ಇಲ್ಲ. ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಕರ್ನಾಟಕವನ್ನು ಇಂದು ಆಳುವುದು ಆ ಪಕ್ಷಗಳಲ್ಲಿ ತುಂಬಿರುವ – ಗಣಿ, ರೀಯಲ್ ಎಸ್ಟೇಟ್ ಮಾಫಿಯಾಗಳು, ಶಿಕ್ಷಣ ಮತ್ತು ಆಸ್ಪತ್ರೆಗಳ ಲಾಬಿಗಳು. ಆದ್ದರಿಂದಲೇ ಶಾಸಕರು ಅಭ್ಯರ್ಥಿಗಳು ಮೂರು ಪಕ್ಷಗಳ ನಡುವೆ ಅಷ್ಟು ಸಲೀಸಾಗಿ ಓಡಾಡಬಲ್ಲರು. ಆದ್ದರಿಂದಲೇ ಈ ಪಕ್ಷಗಳು ಪರಸ್ಪರ ಪರ್ಯಾಯವಾಗಲಾರವು. ಬಂಡವಾಳಶಾಹಿ ಭೂಮಾಲಿಕ ವರ್ಗಗಳು ದೇಶದಲ್ಲಿ ಈ ಎರಡು ಪಕ್ಷಗಳು ಅಥವ ಅವುಗಳ ನೇತೃತ್ವದ ಎರಡೇ ರಂಗಗಳು ಇರಬೇಕೆಂದು ಬಯಸುತ್ತವೆ. ಅದು ಅಮೇರಿಕ ಮಾದರಿಯ ಪ್ರಜಾಪ್ರಭುತ್ವವೂ ಆಗಿದೆ. ಜನಗಳಿಗೆ ಕಾಂಗ್ರೆಸ್ ಬೇಡವಾದರೆ ಬಿ.ಜೆ.ಪಿ.ಯನ್ನು ಅಧಿಕಾರಕ್ಕೆ ತರುತ್ತಾರೆ. ಬಿ.ಜೆ.ಪಿ. ಬಗ್ಗೆ ಬೇಸತ್ತಾಗ ಮತ್ತೆ ಕಾಂಗ್ರೆಸನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಎರಡೂ ಪಕ್ಷಗಳು ಜನ–ವಿರೋಧಿ ನವ–ಉದಾರೀಕರಣದ ಧೋರಣೆಗಳನ್ನೇ ಜಾರಿ ಮಾಡುತ್ತವೆ.

ರಾಜ್ಯದ ಜನತೆ ಬಂಡವಾಳಗಾರರ ಮತ್ತು ಜಮಿನ್ದಾರರ ಈ ಸಂಚನ್ನು ಅರ್ಥಮಾಡಿಕೊಂಡು ವ್ಯಕ್ತಿಗಳಲ್ಲಿ, ಪಕ್ಷಗಳ ನಡುವೆ ಪರ್ಯಾಯವನ್ನು ಹುಡುಕದೆ ಧೋರಣೆಗಳ ಪರ್ಯಾಯವನ್ನು ಕಂಡುಕೊಳ್ಳಲು ಸಾಧ್ಯವಾಗಬೇಕು. ಸಿ.ಪಿ.ಐ.(ಎಂ) ಒಳಗೊಂಡಂತೆ ಎಡ ಪಕ್ಷಗಳು ಮಾತ್ರ ಕಾಂಗ್ರೆಸ್‌ಸಿಗೆ ಮತ್ತು ಬಿ.ಜೆ.ಪಿ.ಗೆ ಧೋರಣಾತ್ಮಕ ಪರ್ಯಾಯವನ್ನು ನೀಡಬಲ್ಲವು. ಅದನ್ನೇ ಎಡ ಪರ್ಯಾಯ ಎಂದು ಕರೆಯಲಾಗುತ್ತದೆ.

ಪಶ್ಚಿಮ ಬಂಗಾಳ ರಾಜ್ಯದಲ್ಲಿ 34 ವರ್ಷಗಳ ಕಾಲ ನಿರಂತರವಾಗಿ, ಕೇರಳದಲ್ಲಿ ಹಲವು ಬಾರಿ ಅಧಿಕಾರಕ್ಕೆ ಬಂದ ಮತ್ತು ತ್ರಿಪುರ ರಾಜ್ಯದಲ್ಲಿ 25 ವರ್ಷಕ್ಕೂ ಹೆಚ್ಚು ಕಾಲ ಸಿ.ಪಿ.ಐ.(ಎಂ) ನೇತೃತ್ವದ ಎಡರಂಗ ಸರ್ಕಾರಗಳು ಈ ಎಡ ಧೋರಣಾತ್ಮಕ




ವ್ಯಂಗಚಿತ್ರ ಕೃಪೆ: ಪಿ.ಮಹಮ್ಮದ್, ವಿಜಯಕರ್ನಾಟಕ

ಪರ್ಯಾಯವನ್ನು ಇಡೀ ದೇಶದ ಮುಂದೆ ಇಟ್ಟಿವೆ.

ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರ ರಾಜ್ಯಗಳ ಜನತೆ ಕಾಂಗ್ರೆಸಿಗೆ ಈ ಎಡ ಪರ್ಯಾಯವನ್ನು ಧೀರ್ಘ ಕಾಲದ ಹೋರಾಟ, ತ್ಯಾಗ ಬಲಿದಾನಗಳಿಂದ ರೂಪಿಸಿಕೊಂಡಿದ್ದಾರೆ. ಧೋರಣೆಗಳ ಪರ್ಯಾಯವು, ಪರ್ಯಾಯ ಧೋರಣೆಗಳಿಗಾಗಿ ಜನತೆ ನಡೆಸುವ ಹೋರಾಟಗಳ ನಡುವೆಯೇ ಹುಟ್ಟಿಕೊಳ್ಳುತ್ತದೆ ಎನ್ನುವುದಕ್ಕೆ ಈ ಮೂರು ರಾಜ್ಯಗಳ ಅನುಭವವೇ ಸಾಕ್ಷಿಯಾಗಿದೆ.

ಈ ರಾಜ್ಯಗಳಲ್ಲಿ ಚುನಾವಣೆಗಳು ಬಂದಾಗ ಮತದಾರರಿಗೆ ಎಡ ಪಕ್ಷಗಳು ಹಣ, ಹೆಂಡ, ಸೀರೆ ಇತ್ಯಾದಿಗಳನ್ನು ಹಂಚಬೇಕಾಗಿಲ್ಲ. ಅಭ್ಯರ್ಥಿಗಳಾಗಿ ಸ್ಪರ್ಧಿಸಲು ಹಣ ಬಲ, ಜಾತಿ ಬಲ, ತೋಳ್ಬಲ ಇದ್ದವರನ್ನು ಹುಡುಕಬೇಕಾಗಿಲ್ಲ. ಟಿಕೆಟ್‌ಗಾಗಿ ಪಕ್ಷದೊಳಗೆ ಕಚ್ಚಾಟ, ಕಿತ್ತಾಟ ಇರುವುದಿಲ್ಲ. ಇಲ್ಲಿ ಸಾಮಾನ್ಯ ಜನ ಚುನಾವಣೆಗಳಲ್ಲಿ ಸ್ಪರ್ಧಿಸಿ ಆಯ್ಕೆಯಾಗುತ್ತಾರೆ. ಚುನಾವಣೆಯಲ್ಲಿ ಗೆದ್ದು ಶಾಸಕರೋ, ಸಚಿವರೋ ಆದ ಬಳಿಕವೂ ಅವರು ಸಾಮಾನ್ಯರ ನಡುವೆ ಸಾಮಾನ್ಯರಾಗಿ ಇರುತ್ತಾರೆ. ಎಡರಂಗದ ಮಂತ್ರಿಗಳ ವಿರುದ್ಧ ಅಥವ ಶಾಸಕರ ವಿರುದ್ಧ ಯಾರಿಂದಲೂ, ಅವರ ವಿರೋಧಿಗಳಿಂದಲೂ ಭ್ರಷ್ಟಾಚಾರದ ಸಣ್ಣ ಆರೋಪವೂ ಕೇಳಿ ಬರುವುದಿಲ್ಲ.

ಪ್ರಗತಿಪರವಾದ ಭೂಸುಧಾರಣೆಗಳನ್ನು ಜಾರಿಗೆ ತರುವ ಮೂಲಕ ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರ ರಾಜ್ಯಗಳಲ್ಲಿ ಶ್ರೀಮಂತ ಜಮಿನ್ದಾರರ ಹೆಚ್ಚುವರಿ ಭೂಮಿಯನ್ನು ಸ್ವಾಧೀನಪಡಿಸಿ ಭೂಹೀನ ದಲಿತರಿಗೆ ಮತ್ತು ಇತರ ಬಡವರಿಗೆ ವಿತರಣೆ ಮಾಡಲಾಗಿದೆ. ಇದರಿಂದಾಗಿ ಕೃಷಿಯಲ್ಲಿ ಗಮನಾರ್ಹ ಪ್ರಗತಿಯಾಗಿದೆ ಮತ್ತು ಕೈಗಾರೀಕರಣಕ್ಕೆ ಅನುಕೂಲ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ. ಇಲ್ಲಿ ಎಡರಂಗ ಸರ್ಕಾರಗಳು ಅಧಿಕಾರದಲ್ಲಿ ಇದ್ದಷ್ಟು ಕಾಲ ರೈತರ ಆತ್ಮಹತ್ಯೆಗಳು ನಡೆಯಲಿಲ್ಲ. ಕೂಲಿಕಾರರ ಹಸಿವಿನ ಸಾವುಗಳು ಸಂಭವಿಸಲಿಲ್ಲ. ಈ ಮೂರು ರಾಜ್ಯಗಳಲ್ಲಿ ಎಡರಂಗ ಸರ್ಕಾರಗಳು 3 ಹಂತಗಳ ಪಂಚಾಯತ್ ಪದ್ಧತಿಯ ಮೂಲಕ ಅಧಿಕಾರ ವಿಕೇಂದ್ರೀಕರಣವನ್ನು ಯಶಸ್ವಿಯಾಗಿ ಜಾರಿಗೊಳಿಸಿವೆ. ಎಡರಂಗ ಸರ್ಕಾರಗಳು ಜನಪರ ಹೋರಾಟಗಳನ್ನು ದಮನ ಮಾಡುವ ಪೋಲಿಸ್ ನೀತಿಯನ್ನು ಅನುಸರಿಸುತ್ತಿರಲಿಲ್ಲ. ಕೋಮು ದಂಗೆಗಳನ್ನು ತಡೆಗಟ್ಟಲು ದೃಢವಾದ ಕ್ರಮಗಳನ್ನು ಅನುಸರಿಸಲಾಗುತ್ತಿತ್ತು. ಸಾರ್ವಜನಿಕ ರೇಷನ್ ವ್ಯವಸ್ಥೆಯನ್ನು ಬಲಪಡಿಸಲು ವಿಶೇಷ ಗಮನ ನೀಡಲಾಗುತ್ತಿತ್ತು. ಬೇರೆ ರಾಜ್ಯಗಳಿಗೆ ಹೋಲಿಸಿದರೆ, ಇಲ್ಲಿ ಎಡರಂಗ ಸರ್ಕಾರಗಳ ಅಧಿಕಾರವಧಿಯಲ್ಲಿ ಮಹಿಳೆಯರ ಮೇಲೆ, ದಲಿತರ ಮೇಲೆ ದೌರ್ಜನ್ಯಗಳು ನಡೆದಿದ್ದು ತೀರಾ ವಿರಳ. ಬಂಗಾಳ (ಮತ್ತು ತ್ರಿಪುರಾದಲ್ಲೂ ಇತ್ತೀಚೆಗೆ) ಎಡರಂಗ ಸರಕಾರದ ಆಡಳಿತ ಕೊನೆಗೊಂಡ ನಂತರ ನಡೆಯುತ್ತಿರುವ ಕೋಮು ಹಿಂಸಾಚಾರ, ಮಹಿಳೆಯರ ಮೇಲೆ ದೌರ್ಜನ್ಯಗಳು, ವ್ಯಾಪಕ ಗೂಂಡಾಗಿರಿ, ಶಾರದ ಚಿಟ್ ಫಂಡ್ ಮುಂತಾದ ಭ್ರಷ್ಟಾಚಾರ ಹಗರಣಗಳು – ಎಡರಂಗ ಸರಕಾರದ ಸಾಧನೆಗಳ ಮಹತ್ವವನ್ನು ನೆನಪಿಸುವಂತೆ ಮಾಡಿದೆ.

## ಕರ್ನಾಟಕದಲ್ಲಿ

## ಎಡ ಪರ್ಯಾಯ ರೂಪಿಸುವಲ್ಲಿ

## ಸಿಪಿಐ(ಎಂ) ಪಾತ್ರ

ಕರ್ನಾಟಕದಲ್ಲಿ ಎಡ ರಾಜಕೀಯ ಪರ್ಯಾಯವನ್ನು ಜನರ ಮುಂದಿಡಲು ಸಿಪಿಐ(ಎಂ) ಮತ್ತು ಇತರ ಎಡ ಪಕ್ಷಗಳು ರೈತರು, ಕಾರ್ಮಿಕರು, ಕೃಷಿ ಕೂಲಿಕಾರರು ಮತ್ತಿತರ ದುಡಿಯುವ ಜನರ ಹಕ್ಕುಗಳಿಗಾಗಿ ಹೋರಾಡುತ್ತಾ ಅವರ ರಾಜಕೀಯ ಪ್ರಜ್ಞೆಯನ್ನು ಎತ್ತರಿಸುವ ಅವರ ತಿಳುವಳಿಕೆಯನ್ನು ಸುಸಂಬದ್ಧಗೊಳಿಸುವ ಕೆಲಸವನ್ನು ಮಾಡುತ್ತಾ ಬಂದಿವೆ. ಈ ನಿಟ್ಟಿನಲ್ಲಿ ಕಳೆದ ಐದು ವರ್ಷಗಳಲ್ಲಿ ನಡೆದ ಹೋರಾಟಗಳಲ್ಲಿ – ಸೆಪ್ಟೆಂಬರ್ 14, 2017ರಂದು ಬೆಂಗಳೂರಿನ ಮಹಾಧರಣಿಯಲ್ಲಿ ಕೊನೆಗೊಂಡ ಕನಿಷ್ಟ ಕೂಲಿ ಮತ್ತಿತರ ಸಾಮಾನ್ಯ ಕಾರ್ಮಿಕ ಪ್ರಶ್ನೆಗಳ ಹಲವು ಹೋರಾಟಗಳು, ಅಂಗನವಾಡಿ ಮತ್ತು ಇತರ ಸ್ಕೀಂ ಕಾರ್ಮಿಕರ ಐತಿಹಾಸಿಕ ಹೋರಾಟಗಳು; ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸಲು, ಭೂಮಿ, ವಸತಿ–ನಿವೇಶನಗಳ ಇತರ ಹಕ್ಕೊತ್ತಾಯಗಳಿಗೆ ನಡೆದ ಸಫಲ ಹೋರಾಟಗಳು; ರೇಗಾ ಜಾರಿಗೆ ನಡೆದ ಹೋರಾಟಗಳು – ಕೆಲವು ಪ್ರಮುಖವಾದವುಗಳು. ಸಿಪಿಐ(ಎಂ) ಸಾಮಾಜಿಕ ದಮನಕ್ಕೆ ಒಳಗಾದ ದಲಿತರು, ಆದಿವಾಸಿಗಳು, ಮುಸ್ಲಿಮರು, ಮಹಿಳೆಯರ ಪ್ರಶ್ನೆಗಳನ್ನು ಎತ್ತಿಕೊಂಡು ಹೋರಾಟ ನಡೆಸಿವೆ. ಜಾತಿ ತಾರತಮ್ಯ, ಅಸ್ಪೃಶ್ಯತೆ, ಕೋಮುವಾದ, ಪುರುಷ–ಅಹಂಕಾರ, ಮೂಢನಂಬಿಕೆಗಳ ಬಗ್ಗೆ ಅರಿವು ಮೂಡಿಸಿ ಅವನ್ನು ದುಡಿಯುವ ಜನಮಾನಸದಿಂದ ತೊಡೆಯುತ್ತಾ, ದುಡಿಯುವ ಜನರ ಐಕ್ಯತೆ ಕಾಪಾಡಲು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಮಡೆಸ್ನಾನ ಪದ್ಧತಿಯ ವಿರುದ್ಧ, ಸಿಗರನಹಳ್ಳಿ ದೇವಾಲಯ ಪ್ರವೇಶಕ್ಕಾಗಿ, ಮರಕುಂಬಿ ಮುಂತಾದ ಕಡೆ ಹಲವು ದಲಿತ ದೌರ್ಜನ್ಯಗಳ ವಿರುದ್ಧ, ಕೋಮು ಸಾಮರಸ್ಯಕ್ಕಾಗಿ ಜಾಥಾಗಳು, ಮಂಗಳೂರು ಸೌಹಾರ್ದ ಸಮಾವೇಶ, ಮೈಸೂರಿನ ದೇಶಪ್ರೇಮಿ ಸಮಾವೇಶ, ಸೌಹಾರ್ದಕ್ಕಾಗಿ ಕರ್ನಾಟಕ ರಾಜ್ಯವ್ಯಾಪಿ ಮಾನವ ಸರಪಣಿ – ಇವು ಪಕ್ಷ ಸಂಘಟಿಸಿದ ಪ್ರಮುಖ ಹೋರಾಟಗಳು. ಮೌಢ್ಯ ಪ್ರತಿಬಂಧಕ ಕಾನೂನಿಗಾಗಿ, ಕಲಬುರ್ಗಿ–ಗೌರಿ ಹತ್ಯೆಗಳ ವಿರುದ್ಧ, ರಾಘವೇಶ್ವರ ಸ್ವಾಮಿಯ ರೇಪ್ ಪ್ರಕರಣಗಳ ವಿರುದ್ಧ – ನಡೆದ ಹೋರಾಟಗಳಲ್ಲಿ ಸಿಪಿಐ(ಎಂ) ಇತರ ಸಂಘಟನೆಗಳ ಜತೆ ಕೈಜೋಡಿಸಿತು.

## ಸಿಪಿಐ(ಎಂ) ಅಭ್ಯರ್ಥಿಗಳನ್ನು ಗೆಲ್ಲಿಸಿ

## ವಿಧಾನಸಭೆಯಲ್ಲಿ ದುಡಿಯುವ ಜನರ ದನಿ ಮೊಳಗಿಸಿ

ರಾಜ್ಯದ ವಿವಿಧ ಜನ ಸಮೂಹಗಳ ತುರ್ತುಸಮಸ್ಯೆಗಳ ಹಾಗೂ ರಾಜ್ಯದ ಒಟ್ಟಾರೆ ಜನತೆಯ ಪ್ರಜಾಸತ್ತಾತ್ಮಕ ಬೇಡಿಕೆಗಳಿಗಾಗಿ ಸಿಪಿಐ(ಎಂ) ನಡೆಸುತ್ತಾ ಬಂದಿರುವ

ಹೋರಾಟಗಳ ಬಗ್ಗೆ ಪಕ್ಷಕ್ಕೆ ತೃಪ್ತಿ ಇಲ್ಲ. ಮಾಡಬೇಕಾದದ್ದು ತುಂಬಾ ಬಾಕಿ ಇದೆ. ಆರಂಭಿಸಿದ ಹೋರಾಟಗಳನ್ನು ಮುಂದುವರೆಸಬೇಕಾಗಿದೆ.

ಜನರ ಹೋರಾಟಗಳು ಶಾಸನ ಸಭೆಯೊಳಗೂ ಪ್ರತಿಧ್ವನಿಸುವುದು ಆಗತ್ಯವಾಗಿದೆ. ಚಳುವಳಿಗಳು ಶಾಸನ ಮಾಡುವವರ ಮೇಲೆ ಪ್ರಭಾವ ಬೀರಬೇಕು. ಶಾಸನ ಸಭೆಗಳ ಚರ್ಚೆಗಳಲ್ಲಿ ಜನಪರ ಹೋರಾಟಗಳನ್ನು ಪ್ರಸ್ತಾಪಿಸುವಂತಹ, ಹೋರಾಡುವ ಜನ ಸಮೂಹಗಳ ನ್ಯಾಯಸಮ್ಮತ ಬೇಡಿಕೆಗಳನ್ನು ಬೆಂಬಲಿಸುವಂತಹ ಜನಪ್ರತಿನಿಧಿಗಳು ಆಯ್ಕೆಯಾಗಬೇಕು. 2004ರ ವಿಧಾನಸಭಾ ಚುನಾವಣೆಯಲ್ಲಿ ಬಾಗೇಪಲ್ಲಿ ಕ್ಷೇತ್ರದಿಂದ ಜಯಗಳಿಸಿದ್ದ ಸಿಪಿಐ(ಎಂ) ಅಭ್ಯರ್ಥಿ ಸಂಗಾತಿ ಜಿ.ವಿ.ಶ್ರೀರಾಮರೆಡ್ಡಿ ರಾಜ್ಯ ವಿಧಾನಸಭೆಯಲ್ಲಿ ದುಡಿಯುವ ಜನರ ಏಕೈಕ ಪ್ರತಿನಿಧಿಯಾಗಿ ಅತ್ಯಂತ ಸಮರ್ಥವಾಗಿ ಕೆಲಸ ಮಾಡಿದ್ದನ್ನು ರಾಜ್ಯದ ಜನತೆ ಈಗಲೂ ಸ್ಮರಿಸುತ್ತಾರೆ. ಆದರೆ ಕಳೆದ 10 ವರ್ಷಗಳಿಂದ ರಾಜ್ಯ ವಿಧಾನಸಭೆಯಲ್ಲಿ ದುಡಿಯುವ ವರ್ಗದ ಒಬ್ಬ ಪ್ರತಿನಿಧಿಯೂ ಇರಲಿಲ್ಲ.

ಈ ನ್ಯೂನತೆಯನ್ನು ನೀಗಿಸಲು ಈ ಸಲ ಸಿಪಿಐ(ಎಂ) ಮತ್ತು ಎಡಪಕ್ಷಗಳ ಅಭ್ಯರ್ಥಿಗಳನ್ನು ಚುನಾಯಿಸಿ ಕರ್ನಾಟಕ ವಿಧಾನಸಭೆಯಲ್ಲಿ ದುಡಿಯುವ ಜನರ ದನಿ ಮೊಳಗಿಸಬೇಕು ಎಂದು ಸಿಪಿಐ(ಎಂ) ಮನವಿ ಮಾಡುತ್ತದೆ.

## ಜನಪರ ಪರ್ಯಾಯ ಕಾರ್ಯಕ್ರಮ

ಈ ಹಿನ್ನೆಲೆಯಲ್ಲಿ ಕಾರ್ಮಿಕರ ಪಕ್ಷವಾದ ಸಿಪಿಐ(ಎಂ), ಕರ್ನಾಟಕದ ರೈತರು, ಕೂಲಿಕಾರರು, ಕಾರ್ಮಿಕರು, ಆದಿವಾಸಿಗಳು, ದಲಿತರು, ಹಿಂದುಳಿದ ಜಾತಿಗಳ ಬಡವರು, ಮಹಿಳೆಯರು, ಮಧ್ಯಮ ವರ್ಗದ ಅಸಂಖ್ಯಾತ ಜನ ಸಮುದಾಯದ ಬದುಕಿನ ಬವಣೆಗಳನ್ನು ನೀಗಿಸಲು, ರಾಜ್ಯವನ್ನು ಜನಪರ ಪರ್ಯಾಯ ಕಾರ್ಯಕ್ರಮವನ್ನು ಜನರ ಮುಂದಿಡುತ್ತಿದೆ.

## ಆಹಾರ ಭದ್ರತೆ

- *ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ತಡೆಗಟ್ಟುವುದು.*
- *ರೇಷನ್ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವುದು; ಎಲ್ಲಾ ಕುಟುಂಬಗಳಿಗೆ ಎ.ಪಿ.ಎಲ್., ಬಿ.ಪಿ.ಎಲ್, ಎಂಬ ಭೇದ ಮಾಡದೆ ಒಂದೇ ರೀತಿಯ ರೇಷನ್ ಕಾರ್ಡುಗಳನ್ನು ವಿತರಿಸಿ ಕೆ.ಜಿ.ಗೆ 2ರೂ. ಮೀರದ ದರಗಳಲ್ಲಿ ತಿಂಗಳಿಗೆ 35 ಕೆ.ಜಿ. ಅಕ್ಕಿ–ಗೋಧಿ ನೀಡುವುದು; ಬೇಳೆಕಾಳುಗಳು, ಉಪ್ಪು, ಔಷಧಿ, ಬಟ್ಟೆ ಇತ್ಯಾದಿ 16 ಜೀವನಾವಶ್ಯಕ ಪದಾರ್ಥಗಳನ್ನು ಸಹ ಕಡಿಮೆ ಬೆಲೆಗೆ ನೀಡುವುದು;; ಆಧಾರ್ ಜೋಡಣೆ ಮುಂತಾದ ಕಡ್ಡಾಯ ಶರತ್ತುಗಳನ್ನು ಕೈಬಿಡುವುದು*

- ಆಹಾರ ಧಾನ್ಯಗಳ ವ್ಯಾಪಾರದಲ್ಲಿ ಮುಂಗಡ ವ್ಯಾಪಾರಕ್ಕೆ ನೀಡಲಾದ ಅನುಮತಿಯನ್ನು ಹಿಂಪಡೆಯುವುದು.
- ಆಹಾರ ಸಬ್ಸಿಡಿಯೂ ಸೇರಿದಂತೆ ಇನ್ನಿತರ ಸಬ್ಸಿಡಿಗಳನ್ನು 'ನೇರ ನಗದು ವರ್ಗಾವಣೆ' ಯೋಜನೆಯ ಅಡಿಯಲ್ಲಿ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡುವ ಉದ್ದೇಶವನ್ನು ಕೈಬಿಡುವುದು.

## ಕೃಷಿ/ರೈತ–ಕೂಲಿಕಾರ

- ಕೃಷಿ ಬೆಳೆಗಳಿಗೆ ಸ್ವಾಮಿನಾಥನ್ ಆಯೋಗ ಶಿಫಾರಸು ಮಾಡಿದಂತೆ ಒಟ್ಟು ಖರ್ಚಿನ ಒಂದುವರೆ ಪಟ್ಟು ಕನಿಷ್ಟ ಬೆಂಬಲ ಬೆಲೆಯನ್ನು ನಿಗದಿ ಪಡಿಸುವುದು ಮತ್ತು ಆ ಬೆಲೆಯಲ್ಲಿ ಸರಕಾರ ಖರೀದಿ ಮಾಡುವಂತೆ ಕಾನೂನಾತ್ಮಕವಾಗಿ ಖಾತರಿ ಪಡಿಸುವುದು
- ರೈತರ ಎಲ್ಲಾ ಸಾಲಗಳನ್ನು ಒಂದು ಬಾರಿ ಮನ್ನಾ ಮಾಡುವ ಕೇರಳ ಎಲ್.ಡಿ.ಎಫ್. ಮಾದರಿಯ ಋಣಭಾರ ವಿಮೋಚನಾ ಕಾಯಿದೆ ಜಾರಿಗೆ ತರುವುದು
- ಬರಗಾಲ ಪೀಡಿತ ಪ್ರದೇಶಗಳಿಗೆ ಶಾಶ್ವತ ನೀರಾವರಿ ಮತ್ತು ಕುಡಿಯುವ ನೀರಿನ ಯೋಜನೆಗಳನ್ನು ರೂಪಿಸುವುದು; ಬಯಲು ಸೀಮೆಯ 7 ಜಿಲ್ಲೆಗಳಿಗಾಗಿ ಪರಮಶಿವಯ್ಯ ವರದಿ ಆಧಾರದಲ್ಲಿ ಶಾಶ್ವತ ನೀರಾವರಿ ಯೋಜನೆಯನ್ನು ರೂಪಿಸುವುದು
- ನೀರಿನ ಖಾಸಗೀಕರಣವನ್ನು ತಡೆಯುವುದು
- ಮಹದಾಯಿ ಕಾವೇರಿ ನೀರು ಹಂಚಿಕೆಯ ಅಂತರ–ರಾಜ್ಯ ವಿವಾದಗಳನ್ನು ಮಾತುಕತೆಗಳ ಮೂಲಕ ಪರಿಹರಿಸಿ ಶೀಘ್ರ ನೀರು ಬಳಕೆಗೆ ಅನುವು ಮಾಡುವುದು
- ಸಮಗ್ರ ಭೂಸುಧಾರಣೆ, ಗೇಣೀದಾರ ರಕ್ಷಣೆ. ಉಚಿತ ವಸತಿ ನಿವೇಶನ ನೀಡಿಕೆ; ಭೂ ಸುಧಾರಣಾ ಕಾನೂನಿಗೆ ತಂದ ರೈತ ವಿರೋಧಿ ತಿದ್ದುಪಡಿಗಳನ್ನು ತೆಗೆದುಹಾಕುವುದು. ನಗರಾಸ್ತಿ ಮಿತಿ ಕಾಯಿದೆ ಮತ್ತೆ ರೂಪಿಸುವುದು.
- ಎ.ಪಿ.ಎಂ.ಸಿ. ಕಾಯ್ದೆಗೆ ಮಾಡಲಾಗಿರುವ ಆನ್–ಲೈನ್ ಟ್ರೇಡಿಂಗ್ ಇತ್ಯಾದಿ ರೈತ ವಿರೋಧಿ ತಿದ್ದುಪಡಿಗಳನ್ನು ಕೈಬಿಡುವುದು.
- ರೈತರ ಒಪ್ಪಿಗೆ ಇಲ್ಲದೆ, ಅವರ ಕೃಷಿ ಭೂಮಿಯನ್ನು ಕೈಗಾರಿಕೆಗಳಿಗಾಗಿ ಸ್ವಾಧೀನಪಡಿಸುವುದನ್ನು ನಿಲ್ಲಿಸುವುದು.
- ರೈತರಿಗೆ ಶೇ. 1ರ ಬಡ್ಡಿ ದರದಲ್ಲಿ ಬ್ಯಾಂಕ್ ಸಾಲ ಒದಗಿಸುವುದು.
- ಕೃಷಿ ಕೂಲಿಕಾರರಿಗೆ ಮತ್ತು ಅಸಂಘಟಿತ ವಲಯದ ಕಾರ್ಮಿಕರಿಗೆ ಕನಿಷ್ಠ ವೇತನ ಹಾಗು ಸಾಮಾಜಿಕ ಭದ್ರತೆಯನ್ನು ಒದಗಿಸುವ ಎರಡು ಪ್ರತ್ಯೇಕ

*ಕಾಯ್ದೆಗಳನ್ನು ರೂಪಿಸಿ ಜಾರಿಗೊಳಿಸುವುದು.*

- *ಉದ್ಯೋಗ ಖಾತ್ರಿ ಯೋಜನೆಯನ್ನು ಎಲ್ಲಾ ಗ್ರಾಮಗಳಲ್ಲಿ ಸಮರ್ಪಕವಾಗಿ ಜಾರಿಗೊಳಿಸುವುದು–ದಿನಗೂಲಿಯನ್ನು ರೂ. 600ಕ್ಕೆ ಏರಿಸುವುದು; ವರ್ಷದಲ್ಲಿ 250 ದಿನ ಕೆಲಸ ಒದಗಿಸುವುದು.*

## ಬಗರ್ ಹುಕುಂ/ವಸತಿ/ನಿವೇಶನ

- *ಬಡವರ ಎಲ್ಲ ಬಗರ್‌ಹುಕುಂ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸುವ ಬಗ್ಗೆ ಇತ್ತೀಚೆಗೆ ಮಾಡಿರುವ ಸರಕಾರದ ನಿರ್ಣಯವನ್ನು ಸಮಗ್ರವಾಗಿ ಜಾರಿಗೊಳಿಸಿ ಸಾಗುವಳಿ ಚೀಟಿ ಕೊಡುವುದು.*
- *ವಸತಿರಹಿತರು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಅವರಿಗೆ ನಿವೇಶನಗಳನ್ನು ಒದಗಿಸಲು ಸಮಗ್ರವಾದ ಕಾರ್ಯ ಯೋಜನೆಯನ್ನು ಸಿದ್ಧಪಡಿಸಿ ಜಾರಿಗೊಳಿಸುವುದು.*
- *ಅನೇಕ ವರ್ಷಗಳಿಂದ ಅರಣ್ಯ ಭೂಮಿಯನ್ನು ಸಾಗುವಳಿ ಮಾಡುತ್ತಿರುವ ಬಡವರನ್ನು ಅಥವ ಭೂಮಿಯಲ್ಲಿ ಮನೆಕಟ್ಟಿಕೊಂಡು ವಾಸ ಇರುವ ಬಡವರನ್ನು ಒಕ್ಕಲೆಬ್ಬಿಸದಂತೆ ತಡೆಯುವುದು. ಮತ್ತು ಹಕ್ಕುಪತ್ರ ವಿತರಿಸುವುದು*
- *ಶ್ರೀಮಂತರು ಕಬಳಿಸಿದ ಸರ್ಕಾರಿ ಭೂಮಿಯನ್ನು ವಶಪಡಿಸಿಕೊಂಡು ಬಡವರಿಗೆ ವಿತರಣೆ ಮಾಡುವುದು.*

## ಕಾರ್ಮಿಕರು/ಕೈಗಾರಿಕೆ

- *ಅಸಂಘಟಿತ ವಲಯದ ಎಲ್ಲಾ ಕಾರ್ಮಿಕ–ನೌಕರರಿಗೆ ತಿಂಗಳಿಗೆ ರೂ. 18,000 ಕನಿಷ್ಠ ಕೂಲಿಯನ್ನು ನಿಗದಿ ಪಡಿಸುವುದು.*
- *ಗುತ್ತಿಗೆ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ/ಸೌಲಭ್ಯಗಳನ್ನು ನೀಡಬೇಕು ಎಂದು ನಿರ್ದೇಶಿಸುವ ಸುಪ್ರೀಂ ಕೋರ್ಟಿನ ತೀರ್ಪನ್ನು ಜಾರಿ ಮಾಡುವುದು*
- *ಕರ್ನಾಟಕ ಸರಕಾರದ ವಿವಿಧ ಇಲಾಖೆ ಮತ್ತು ಸಂಸ್ಥೆಗಳಲ್ಲಿ ಗುತ್ತಿಗೆ ಮತ್ತು ಇತರೆ ಖಾಯಮೇತರ ಕಾರ್ಮಿಕರನ್ನು ಖಾಯಂ ಮಾಡುವುದು*
- *ಸ್ಕೀಂ ನಲ್ಲಿ ದುಡಿಯುವ ನೌಕರರನ್ನು 2012ರಲ್ಲಿ ನಡೆದ 45 ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸಿನ ಪ್ರಕಾರ ಕಾರ್ಮಿಕರು ಎಂದು ಪರಿಗಣಿಸಿ ಕನಿಷ್ಠ ಕೂಲಿ ನೀಡುವುದು*
- *ಕಾರ್ಮಿಕ ಕಾನೂನುಗಳ ಸಮರ್ಪಕ ಜಾರಿಗಾಗಿ ಒತ್ತಾಯಿಸುವುದು; ಮಾಲಿಕ–ಪರ ತಿದ್ದುಪಡಿಗಳನ್ನು ಹಿಂತೆಗೆಯುವುದು; ಕಾರ್ಮಿಕರ ಹಿತದೃಷ್ಟಿಯಿಂದ ಆಗಬೇಕಾದ ಕಾರ್ಮಿಕ ಕಾನೂನುಗಳ ತಿದ್ದುಪಡಿಗೆ ಒತ್ತಾಯಿಸುವುದು.*

- *ಭಾರತೀಯ ಕಾರ್ಮಿಕ ಸಮ್ಮೇಳನ ಮಾದರಿಯ ಕರ್ನಾಟಕ ಕಾರ್ಮಿಕ ಸಮ್ಮೇಳನ ಸಂಘಟಿಸುವುದು*
- *ಗಣಿಗಾರಿಕೆಯನ್ನು ರಾಷ್ಟ್ರೀಕರಿಸುವುದು.*
- *ಬಿ.ಇ.ಎಂ.ಎಲ್., ಎಚ್.ಎ.ಎಲ್., ಬಿ.ಇ.ಎಲ್., ಬಿ.ಎಚ್.ಇ.ಎಲ್. ಮುಂತಾದ ಸಾರ್ವಜನಿಕ ಉದ್ಯಮಗಳ ಖಾಸಗೀಕರಣ, ದುರ್ಬಲಗಳಿಸುವುದು, ಹಾಗೂ ಮುಚ್ಚುವ ಪ್ರಕ್ರಿಯೆಗಳನ್ನು ನಿಲ್ಲಿಸುವುದು*
- *ಸಾರ್ವಜನಿಕ ಕೈಗಾರಿಕೆಗಳ ಪುನರ್ ಸ್ಥಾಪನೆ. ಹೊಸ ಕೈಗಾರಿಕೆಗಳ ಸ್ಥಾಪನೆ. ರಾಜ್ಯದ ವಿವಿಧ ಪ್ರದೇಶಗಳಿಗೆ ಕೈಗಾರಿಕೆಗಳ ವಿಕೇಂದ್ರೀಕರಣ.*
- *ಸಣ್ಣ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳಿಗೆ ಮೀಸಲಾತಿ, ಸುಲಭ ಸಾಲ, ಮಾರುಕಟ್ಟೆ ಸೌಲಭ್ಯ*
- *ಮುಚ್ಚಿದ ಕೆ.ಜಿ.ಫ್. ಚಿನ್ನದ ಗಣಿಯನ್ನು ಪುನರಾರಂಭಿಸಲು ಹೋರಾಟವನ್ನು ತೀವ್ರಗೊಳಿಸುವುದು*
- *ಬೃಹತ್ ಮೀನುಗಾರ ಕಂಪೆನಿಗಳಿಗೆ ಅನುಮತಿ ನೀಡುವುದನ್ನು ನಿಲ್ಲಿಸಿ ಮೀನುಗಾರರ ಹಿತ ಕಾಪಾಡುವುದು.*
- *ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಪ್ರವೇಶವನ್ನು ವಿರೋಧಿಸುವುದು*
- *ನಗರಗಳಲ್ಲಿರುವ ಎಲ್ಲಾ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ ಅಲ್ಲಿನ ನಿವಾಸಿಗಳಿಗೆ ಹಕ್ಕುಪತ್ರ ನೀಡುವುದು*
- *ನಗರಗಳ ಯೋಜಿತ ಬೆಳವಣಿಗೆ. ಪರಿಸರ ಸಂರಕ್ಷಣೆ; ಸಾರ್ವಜನಿಕ ಸಾರಿಗೆಯ ಬೆಳವಣಿಗೆ*

## ಸಾಮಾಜಿಕ

- *ಎಸ್.ಸಿ/ಎಸ್.ಟಿ. ದೌರ್ಜನ್ಯ ತಡೆ ಕಾಯಿದೆ ದುರ್ಬಲಗೊಳಿಸುವುದನ್ನು ವಿರೋಧಿಸುವುದು; ದೌರ್ಜನ್ಯ ತಡೆ ಕಾಯಿದೆಯನ್ನು ಇನ್ನಷ್ಟು ಗಟ್ಟಿಗೊಳಿಸುವ 2014 ಮಸೂದೆಯನ್ನು ಕಾಯಿದೆ ಮಾಡುವುದು; ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲು ಹಿಂದೇಟು ಹಾಕುವ ಪೊಲೀಸರ ವಿರುದ್ಧ ಕಠಿಣ ಕ್ರಮಕ್ಕಾಗಿ ಒತ್ತಾಯಿಸುವುದು*
- *ಖಾಸಗಿ ರಂಗದಲ್ಲಿಯೂ ಮೀಸಲಾತಿ ಜಾರಿಗಾಗಿ ಒತ್ತಾಯಿಸುವುದು; ದಲಿತ ಕ್ರೈಸ್ತರಿಗೂ ಮೀಸಲಾತಿಯನ್ನು ವಿಸ್ತರಿಸುವುದು.*
- *ಪರಿಶಿಷ್ಟ ಜಾತಿಗಳ ಹಾಗೂ ಪರಿಶಿಷ್ಟ ಪಂಗಡಗಳ ಉಪ ಯೋಜನೆಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ನೀಡುವುದು ಮತ್ತು ಅದರ ದುರ್ಬಳಕೆ ತಡೆಯುವುದು.*

- ಎಸ್‌ಸಿ/ಎಸ್‌ಟಿ ನೌಕರರ ಬಡ್ತಿ ಮೀಸಲಾತಿಯನ್ನು ಅನುಷ್ಠಾನಗೊಳಿಸಲು, ಸಂವಿಧಾನ ತಿದ್ದುಪಡಿ ಮಾಡುವುದು
- ಕುಣಬಿ, ಗೌಳಿ, ಹಾಲಕ್ಕಿ, ಕುಂಬ್ರಿ, ಮರಾಠಿ ಮುಂತಾದ ಸಮುದಾಯಗಳನ್ನು ಎಸ್‌ಟಿ ಪಟ್ಟಿಗೆ ಸೇರಿಸಲು ಒತ್ತಾಯಿಸುವುದು
- ಅರಣ್ಯವಾಸಿಗಳ ಜೀವನ ದುರ್ಭರಗೊಳಿಸುವ ಪರಿಸರ ಸೂಕ್ಷ್ಮ ವಲಯದ ಜಾರಿ ತಡೆಯುವುದು
- ಅರಣ್ಯದ ಖಾಸಗೀಕರಣ ಮತ್ತು ವ್ಯಾಪಾರೀಕರಣ ಮಾಢುವ ಉದ್ದೇಶದ ಅರಣ್ಯ ಕಾಯಿದೆ 2018ನ್ನು ಹಿಂತೆಗೆಯಲು ಒತ್ತಾಯಿಸುವುದು
- ದೇವದಾಸಿ ಮಹಿಳೆಯರ ಕುಟುಂಬದ ಎಲ್ಲ ಸದಸ್ಯರನ್ನು ಗಣತಿ ಮಾಡಿ ಎಲ್ಲರನ್ನು ಪುನರ್ವಸತಿ ಗೊಳಪಡಿಸಲು ವ್ಯಾಪಕವಾದ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು
- ಮುಸ್ಲಿಂ ಅಲ್ಪಸಂಖ್ಯಾತರ ಬೆಳವಣಿಗೆಗೆ ಸಾಚಾರ್ ಸಮಿತಿಯ ಹಾಗೂ ರಂಗನಾಥ್ ಮಿಶ್ರಾ ಸಮಿತಿಯ ಶಿಫಾರಸುಗಳನ್ನು ಜಾರಿಗೆ ತರಲು ಒತ್ತಾಯಿಸುವುದು.
- ಬಾಬಾಬುಡನ್‌ಗಿರಿ ಬಗ್ಗೆ ಸುಪ್ರೀಂಕೋರ್ಟಿನ ತೀರ್ಪನ್ನು ಜಾರಿ ಗೊಳಿಸುವುದು
- ಗೋಹತ್ಯೆ ವಿರೋಧ, ಲವ್-ಜಿಹಾದ್, ಹಿಂದೂ ಸಂಸ್ಕೃತಿಗೆ ಅಪಾಯ – ಮುಂತಾದ ಹೆಸರಿನಲ್ಲಿ ನಡೆಸಲಾಗುತ್ತಿರುವ ದಾಳಿಯನ್ನು ಅಪರಾಧ ಎಂದು ಪರಿಗಣಿಸುವ ಕಾನೂನು ಮಾಡಿ ಜಾರಿ ಮಾಡುವುದು
- ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಾಗಿ ಬಂದ ನಿರ್ಭಯ ಕಾನೂನಿನ ಸಮಗ್ರ ಜಾರಿಗೆ ವ್ಯವಸ್ಥೆ
- ಹೆಣ್ಣು ಮಕ್ಕಳ ಮೇಲಿನ ಅತ್ಯಾಚಾರ ತಡೆಗೆ ಪೋಕ್ಸೊ ಕಾಯಿದೆಯ ಕಟ್ಟು ನಿಟ್ಟಿನ ಜಾರಿಗೆ ವ್ಯವಸ್ಥೆ
- ಮಹಿಳೆಯರಿಗೆ ರಕ್ಷಣೆ ಒದಗಿಸುವ ಐಪಿಸಿ ಯ ಸೆಕ್ಷನ್ 498ಎ, ವರದಕ್ಷಿಣೆ ಹಾಗೂ ಕೌಟುಂಬಿಕ ಹಿಂಸೆಯ ವಿರುದ್ಧದ ಮತ್ತು ಭ್ರೂಣ ಪರೀಕ್ಷಾ ಪತ್ತೆ ಕಾಯ್ದೆಗಳನ್ನು ದುರ್ಬಲಗೊಳಿಸುವ ಪ್ರಯತ್ನವನ್ನು ವಿರೋಧಿಸುವುದು
- ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ.33 ರ ಮೀಸಲಾತಿ ಕಾಯ್ದೆಗಾಗಿ ಒತ್ತಾಯಿಸುವುದು.
- ದುಡಿಯುವ ಮಹಿಳೆಯರು ಅನುಭವಿಸುತ್ತಿರುವ ಲೈಂಗಿಕ ಕಿರುಕುಳ ತಡೆಯಲು ಸುಪ್ರೀಂ ಕೋರ್ಟಿನ ವಿಶಾಖಾ ನಿರ್ದೇಶನ ಸೂತ್ರಗಳ ಜಾರಿಗೆ ಆಗ್ರಹಿಸುವುದು
- ಸ್ತ್ರೀಶಕ್ತಿ ಸ್ವಸಹಾಯಕ ಸಂಘದ ಸಾಲಗಳನ್ನು ಮನ್ನಾ ಮಾಡುವುದು

- *ಶಿಕ್ಷಣಕ್ಕೆ ರಾಜ್ಯ ಬಜೆಟ್‌ನಲ್ಲಿ ಅನುದಾನ ಹೆಚ್ಚಿಸುವುದು.*
- *ಸಾರ್ವಜನಿಕ ಶಿಕ್ಷಣವನ್ನು ಆಧುನಿಕಗೊಳಿಸಿ ಆಕರ್ಷಿಸುವುದು; ಕನ್ನಡ ಮಾಧ್ಯಮವನ್ನು ಬಲಪಡಿಸುವುದು; ಹೊಸ ಸರ್ಕಾರಿ ಕಾಲೇಜುಗಳ ಸ್ಥಾಪನೆ; ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ; ಸಾರ್ವಜನಿಕ ಆರೋಗ್ಯ ಸಂಸ್ಥೆಗಳನ್ನು ಆಧುನಿಕಗೊಳಿಸಿ ಬಲಪಡಿಸುವುದು;*
- *ಸಮಾಜ ಕಲ್ಯಾಣ ಇಲಾಖೆ ನಡೆಸುತ್ತಿರುವ ಹಾಸ್ಟೇಲ್‌ಗಳ ಅನುದಾನವನ್ನು ಪ್ರತಿವರ್ಷ ಹೆಚ್ಚಿಸುವುದು. ಹಾಸ್ಟೇಲ್ ಸಂಖ್ಯೆಯನ್ನು ಹೆಚ್ಚಿಸುವುದು.*
- *ಎಲ್ಲಾ ಹಂತಗಳಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿಸುವುದು; ಮಾತೃಭಾಷೆಯೇ ಶಿಕ್ಷಣದ ಮಾಧ್ಯಮವಾಗಿಸಲು ಒತ್ತಾಯಿಸುವುದು; ನೆಲ–ಜಲ ವಿವಾದಗಳನ್ನು ಪರಸ್ಪರ ಮಾತುಕತೆಯ ಮೂಲಕ ಬಗೆ ಹರಿಸುವುದು*
- *ಕನ್ನಡ ಭಾಷೆಯ ಬೆಳವಣಿಗೆ, ಜನಪರ ಸಾಹಿತ್ಯ ರಚನೆ, ಪ್ರಸಾರಕ್ಕೆ ಬೆಂಬಲ; ಜನಪದ ಸಾಹಿತ್ಯ ಸಂಸ್ಕೃತಿಯ ಬೆಳವಣಿಗೆ*
- *ಶಾಲಾ ಮಕ್ಕಳಿಗೆ ಗುಣಮಟ್ಟದ ಬಿಸಿಯೂಟವನ್ನು ಒದಗಿಸುವುದು.*
- *ನೇಮಕಾತಿ ನಿರ್ಬಂಧಗಳನ್ನು ಕೈಬಿಟ್ಟು ಸರಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬುವುದು.*
- *ಸಾರ್ವಜನಿಕ ಆರೋಗ್ಯಕ್ಕೆ ಬಜೆಟ್ ಅನುದಾನವನ್ನು ಹೆಚ್ಚಿಸುವುದು; ಶುಲ್ಕ ಮಿತಿ ನಿಗದಿ, ಗುಣಮಟ್ಟ ಸೇರಿದಂತೆ ಖಾಸಗಿ ಆಸ್ಪತ್ರೆಗಳ ಪರಿಣಾಮಕಾರಿ ನಿಯಂತ್ರಣ*
- *ಈಗ ಇರುವ ಸಾಮಾಜಿಕ ನ್ಯಾಯದ ಕ್ರಮಗಳಿಗೆ ಧಕ್ಕೆಯಾಗದಂತೆ ಲಿಂಗಾಯತ ಸ್ವತಂತ್ರ ಧರ್ಮಕ್ಕೆ ಮಾನ್ಯತೆ ಕೊಡುವುದು*
- *ಕರ್ನಾಟಕದ ಸೌಹಾರ್ದ ಪರಂಪರೆಯನ್ನು ಉಳಿಸಿ ಬೆಳೆಸುವುದು*

ಎಡ ಪರ್ಯಾಯ ಧೋರಣೆಗಳಿಗೆ ಅನುಗುಣವಾದ ಮೇಲಿನ ಪ್ರಶ್ನೆಗಳಿಗಾಗಿ ಮತ್ತು ಆಗಾಗ ತಲೆದೋರಬಹುದಾದ ಹೊಸ ಪ್ರಶ್ನೆಗಳಿಗಾಗಿ ಸಿಪಿಐ(ಎಂ) ನಡೆಸುವ ಹೋರಾಟಗಳನ್ನು ಬಲಪಡಿಸಲು ಸಿಪಿಐ(ಎಂ) ಅಭ್ಯರ್ಥಿಗಳನ್ನು ಗೆಲ್ಲಿಸಬೇಕೆಂದು ಕೋರುತ್ತೇವೆ, ಹಾಗೆಯೇ ಸಿ.ಪಿ.ಐ.(ಎಂ) ಸ್ಪರ್ಧಿಸದೆ ಇರುವ ಕ್ಷೇತ್ರಗಳಲ್ಲಿ ಸಿಪಿಐ, ಸಿಪಿಐ(ಎಂ.ಎಲ್.)–ಲಿಬರೇಶನ್, ಎಸ್.ಯು.ಸಿ.ಐ.(ಸಿ) ಪಕ್ಷಗಳ ಅಭ್ಯರ್ಥಿಗಳನ್ನು ಗೆಲ್ಲಿಸಬೇಕೆಂದು ವಿನಂತಿಸುತ್ತೇವೆ.

ಬೆಂಗಳೂರು
25.04.2018

**ಜಿ.ವಿ. ಶ್ರೀರಾಮರೆಡ್ಡಿ**
ಕಾರ್ಯದರ್ಶಿ

# ಸಿಪಿಐ(ಎಂ)ಗೆ ನಿಮ್ಮ ಮತ

ಪ್ರಕಟಣೆ:
**ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)**, ಕರ್ನಾಟಕ ರಾಜ್ಯಸಮಿತಿ
ಇ.ಎಂ.ಎಸ್. ಭವನ, ನಂ. 37/ಎ, 8ನೇ ಅಡ್ಡರಸ್ತೆ, ಮಹಾಲಕ್ಷ್ಮೀ ಲೇಔಟ್
ಬೆಂಗಳೂರು–86 ದೂ.: 080 23491114

ಮುದ್ರಣ: ಕ್ರಿಯಾ ಪ್ರಕಾಶನ, ಎಸ್.ಆರ್.ನಗರ, ಬೆಂಗಳೂರು–27 ದೂ.: 080 2234369 ಪ್ರತಿಗಳು: 10,000